# महाकविविशाखदत्तप्रणीतम्

# मुद्राराक्षसम्

## प्रथमोऽङ्कः

ಮಹಾಕವಿ ವಿಶಾಖದತ್ತ ಪ್ರಣೀತ

# ಮುದ್ರಾರಾಕ್ಷಸಮ್

## ಪ್ರಥಮೋಽಂಕಃ

# Mudrarakshasam

# Act - I

**(Fourth Semester B.Com course Language Sanskrit, Edited with Translation in Kannada and English, Introduction Notes)**

**EDITORS**
**Prof. Ganesh Kamath M.**
**Associate Prof. & HOD (Rtd.)**
**Department of Sanskrit**
**Govt. Science College, Bengaluru-560 001.**

**Prof. N.R. Subrahmanya**
**HOD Department of Sanskrit**
**Sindhi College, Bengaluru-560 024.**

**PRASARANGA**
**Bengaluru City University**
**Bengaluru-560 001.**

**Mudrarakshasam – I Act :** A prescribed text book for IV Sem B.Com Degree Classes. Edited by Prof. Ganesh Kamath M., HOD Dept. of Sanskrit (Rtd.) Govt. Sicence College, Bengaluru and Prof. N.R. Subrahmanya, HOD Dept. of Sanskrit Sindhi College, Kempapura, Hebbal, Bengaluru-560 024.

**Page :**

**Price :**

**Published by**
Prasaranga
Bengaluru City University
Central College Campus,
Bengaluru-560 001.

# ಮೊದಲ ಮಾತು

ಬೆಂಗಳೂರು ನಗರ ವಿಶ್ವವಿದ್ಯಾಲಯವು ರಾಜ್ಯದ ಭಾಷಾ ನೀತಿಯಂತೆ ಪದವಿ ಹಂತದಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಎರಡು ವರ್ಷಗಳ ಕಾಲ (1 ರಿಂದ 4 ನೇ ಸೆಮಿಸ್ಟರ್‌ವರೆಗೆ) ಇಂಗ್ಲೀಷ್ ಜೊತೆಗೆ ಯಾವುದಾದರೂ ಮತ್ತೊಂದು ಭಾಷೆಯನ್ನು ಅಧ್ಯಯನ ಮಾಡಬೇಕು. ಈ ನಿಯಮದಂತೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಯನ ಮಂಡಲಿಯು (BOS UG) 4ನೇ ಸೆಮಿಸ್ಟರ್ ಬಿ.ಕಾಂ. ಪದವಿ ತರಗತಿಯ ಸಂಸ್ಕೃತ ಭಾಷಾ ವಿದ್ಯಾರ್ಥಿಗಳಿಗೆ ವಿಶಾಖದತ್ತನ ಮುದ್ರಾರಾಕ್ಷಸ ನಾಟಕದ ಮೊದಲನೇ ಅಂಕವನ್ನು ಪಠ್ಯವನ್ನಾಗಿ ನಿಗದಿಪಡಿಸಿದೆ. ಭಾರತೀಯ ಸಂಸ್ಕೃತಿಯ ಜ್ಞಾನ ಮತ್ತು ಮಾನವೀಯ ಮೌಲ್ಯಗಳ ಅಳವಡಿಕೆಗೆ ಸಂಸ್ಕೃತ ಭಾಷಾಧ್ಯಯನ ಅತ್ಯವಶ್ಯಕವಾಗಿದೆ.

ವಿಶಾಖದತ್ತ ವಿರಚಿತ ಮುದ್ರಾರಾಕ್ಷಸ ನಾಟಕದ "ಅಂಗುಲೀ ಮುದ್ರಾಧಿಗಮಃ" ಎಂಬ ಮೊದಲ ಅಂಕವನ್ನು ಪೀಠಿಕೆ, ಟಿಪ್ಪಣಿ ಸಹಿತ ಕನ್ನಡ ಮತ್ತು ಆಂಗ್ಲ ಭಾಷಾನುವಾದವನ್ನು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಶ್ರೀ ಗಣೇಶ ಕಾಮತ್ ಎಂ., ಸಂಸ್ಕೃತ ಸಹಪ್ರಾಧ್ಯಾಪಕರು, (ನಿವೃತ್ತ) ಸರ್ಕಾರಿ ವಿಜ್ಞಾನ ಕಾಲೇಜು ಬೆಂಗಳೂರು ಮತ್ತು ವಿದ್ವಾನ್ ಶ್ರೀ ಸುಬ್ರಹ್ಮಣ್ಯ ಭಟ್, ಮುಖ್ಯಸ್ಥರು ಸಂಸ್ಕೃತ ವಿಭಾಗ, ಸಿಂಧಿ ಕಾಲೇಜು ಇವರು ಸಕಾಲಕ್ಕೆ ಸಂಪಾದಿಸಿ ಸಿದ್ಧಪಡಿಸಿಕೊಟ್ಟಿರುತ್ತಾರೆ. ಇವರಿಗೆ ನನ್ನ ಅಭಿನಂದನೆಗಳು.

ಸಂಸ್ಕೃತ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಈ ಕೃತಿಯ ಸದುಪಯೋಗ ಪಡೆಯುವರೆಂದು ಆಶಿಸುತ್ತೇನೆ.

**ಪ್ರೊ|| ಲಿಂಗರಾಜ ಗಾಂಧಿ**

**ಕುಲಪತಿಗಳು**

# ಸಂಪಾದಕರ ನುಡಿ

ಸಂಸ್ಕೃತ ಸಾಹಿತ್ಯ ಪ್ರಕಾರಗಳಲ್ಲಿ ನಾಟಕ ಸಾಹಿತ್ಯವು ಬಹು ರಮ್ಯ ಮತ್ತು ಜಗತ್ ಪ್ರಸಿದ್ಧವಾದುದು. काव्येषु नाटकं रम्यम् ಎಂಬಂತೆ, ನಾಟಕಗಳ ಪ್ರಯೋಜನ ಕೇವಲ ಮನೋರಂಜನೆ ಮಾತ್ರವಲ್ಲ ಆತ್ಮೋನ್ನತಿಗೆ ಸಹಾಯಕವಾದ ಸತ್ಯನಿಷ್ಠೆ, ಸಾಮಾಜಿಕ ಕಳಕಳಿ ಮತ್ತು ನೈತಿಕ ಮುನ್ನಡೆಯ ಸಾಧನಗಳೇ ಆಗಿವೆ. ಇಂತಹ ನಾಟಕ ಸಾಹಿತ್ಯದಲ್ಲಿ ಒಂದು ಪ್ರಮುಖ ಕೃತಿಯೇ ವಿಶಾಖದತ್ತನ ಮುದ್ರಾರಾಕ್ಷಸ. ರಾಜಕೀಯ ಕಥಾವಸ್ತುವುಳ್ಳ ಈ ನಾಟಕ, ಆಗಿನ ಕಾಲದ ಮತ್ತು ಈಗಲೂ ಅನ್ವಯವಾಗುವ ನೈತಿಕ, ಸಾಮಾಜಿಕ ಮತ್ತು ಪಾರಮಾರ್ಥಿಕ ಮೌಲ್ಯಗಳ ಕೈಪಿಡಿ ಆಗಿದೆ. ಸಮಗ್ರ ಭಾರತದ ಏಕೀಕರಣದ ಗುರಿ ಹೊಂದಿದ ಆಚಾರ್ಯ ಚಾಣಕ್ಯರ ರಾಜಕೀಯ ಪ್ರೇರಕಶಕ್ತಿ ಮತ್ತು ಮುತ್ಸದ್ದಿತನದ ಸಮಗ್ರತನ ಇಲ್ಲಿ ಮೂಡಿಬಂದಿದ್ದು ಯುವಜನತೆಗೆ ಮಾರ್ಗದರ್ಶಕವಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಂಸ್ಕೃತ ಅಧ್ಯಯನ ಮಂಡಳಿಯು 2020–21 ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ನಾಲ್ಕನೇ ಸೆಮಿಸ್ಟರ್ ಬಿ.ಕಾಂ. ಪದವಿ ತರಗತಿಗಳಿಗೆ ಮುದ್ರಾರಾಕ್ಷಸ ನಾಟಕದ ಪ್ರಥಮ ಅಂಕವನ್ನು ಪಠ್ಯವನ್ನಾಗಿ ನಿಗದಿಪಡಿಸಿತ್ತು, ಇದರ ಸಂಪಾದನಾ ಕಾರ್ಯವನ್ನು ನಮಗೆ ವಹಿಸಿದ್ದು, ಅದರಂತೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ಪಠ್ಯವನ್ನು ಸಿದ್ಧಪಡಿಸಿದ್ದು, ಸಮಗ್ರ ನಾಟಕದ ಕಥಾವಸ್ತು, ಪೀಠಿಕೆ, ಪಾತ್ರಚಿತ್ರಣ ಸಂಸ್ಕೃತ ಮೂಲ, ಕನ್ನಡ ಮತ್ತು ಇಂಗ್ಲೀಷ್ ಭಾಷಾಂತರ ಹಾಗೂ ಅವಶ್ಯ ಟಿಪ್ಪಣಿಗಳೊಂದಿಗೆ ನೀಡಲಾಗಿದೆ. ಈ ಕಾರ್ಯದಲ್ಲಿ ಮುಖ್ಯವಾಗಿ ಮಹಾಮಹೋಪಾಧ್ಯಾಯ ಶ್ರೀ ಎಂ.ಆರ್. ಕಾಳೆರವರ ಸಂಸ್ಕೃತ ಕೃತಿಯನ್ನು ಆಧಾರವಾಗಿಟ್ಟುಕೊಂಡು ಉಪಲಬ್ಧವಿರುವ ಇತರ ಅನೇಕ ಕೃತಿಗಳ ಸಹಾಯವನ್ನು ಪಡೆದಿದ್ದೇವೆ. ಇವರಿಗೆಲ್ಲ ನಾವು ಆಭಾರಿಯಾಗಿರುತ್ತೇವೆ. ಮುದ್ರಾರಾಕ್ಷಸ ನಾಟಕವನ್ನು ಕುರಿತು

ವಿದ್ವತ್ಪೂರ್ಣವಾದ ಪ್ರವಚನಮಾಲೆಯನ್ನು ನಡೆಸಿದ ಶತಾವಧಾನೀ ಡಾ. ರಾ. ಗಣೇಶ್‌ರವರಿಗೂ ನಾವು ಚಿರಋಣಿಗಳಾಗಿದ್ದೇವೆ.

ಈ ಪಠ್ಯಪುಸ್ತಕವನ್ನು ಸಂಪಾದಿಸಲು ಪ್ರೋತ್ಸಾಹ ನೀಡಿದ ಸಂಸ್ಕೃತ ಅಧ್ಯಯನ ಮಂಡಳಿಯ ಹಾಲಿ ಅಧ್ಯಕ್ಷರಾಗಿರುವ ಡಾ. ಪಂಕಜನಯನರವರಿಗೆ ಮತ್ತು ಮಾಜಿ ಅಧ್ಯಕ್ಷರಾದ ಡಾ. ಚಂದ್ರಮೌಳಿ ನಾಯ್ಕರ್‌ರವರಿಗೂ, ಹಾಗೇ ಸಂಸ್ಕೃತ ಅಧ್ಯಯನ ಮಂಡಳಿಯ ಆತ್ಮೀಯ ಸದಸ್ಯರಿಗೂ ನಮ್ಮ ಅನಂತಾನಂತ ವಂದನೆಗಳು. ಸದಾಕಾಲ ನಮಗೆ ಬೆನ್ನೆಲುಬಾಗಿ ನಿಂತು ಮಾರ್ಗದರ್ಶನ ಮಾಡುವ ನಮ್ಮ ಗುರುಗಳಾದ ಡಾ. ಎಂ.ಶಿವಕುಮಾರ ಸ್ವಾಮಿಗಳು ಮತ್ತು ಪ್ರೊ. ಬಿ.ಜಿ. ಶ್ರೀಲಕ್ಷ್ಮಿಯವರಿಗೆ ನಾವು ಚಿರಋಣಿಗಳು. ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ॥ ಲಿಂಗರಾಜ ಗಾಂಧಿರವರಿಗೂ ಹಾಗೂ ಕುಲಸಚಿವರಿಗೂ ವಂದನೆಗಳನ್ನು ಸಲ್ಲಿಸುತ್ತಿದ್ದೇವೆ.

ಈ ಪಠ್ಯಭಾಗದ ಡಿ.ಟಿ.ಪಿ. ಕಾರ್ಯವನ್ನು ಅತ್ಯಂತ ದಕ್ಷತೆಯಿಂದ ಪೂರ್ಣಗೊಳಿಸಿದ ಕು॥ ಬಿ.ಹೇಮಲತಾ ರವರಿಗೆ ಧನ್ಯವಾದಗಳು.

**ಪ್ರೊ॥ ಗಣೇಶ ಕಾಮತ್ ಎಂ.**
**ಸಹ ಪ್ರಾಧ್ಯಾಪಕರು ಹಾಗೂ**
**ಮುಖ್ಯಸ್ಥರು (ನಿ) ಸಂಸ್ಕೃತ ವಿಭಾಗ,**
**ಸರ್ಕಾರಿ ವಿಜ್ಞಾನ ಕಾಲೇಜು,**
**ಬೆಂಗಳೂರು**

**ಪ್ರೊ. ಎನ್.ಆರ್. ಸುಬ್ರಹ್ಮಣ್ಯ**
**ಮುಖ್ಯಸ್ಥರು**
**ಸಂಸ್ಕೃತ ವಿಭಾಗ,**
**ಸಿಂಧಿ ಕಾಲೇಜು,**
**ಬೆಂಗಳೂರು**

# EDITOR'S WORDS

The drama Mudra-Rakshasa by Vishakhadatta is very unique in Sanskrit literature. It advocates political theme weaved with moral, social and ethical values prevailed during the period of Indian history. The contribution of the great teacher Chanakya in integrating the political 'will' and 'malo' of India is highlighted in this drama.

An attempt has been made here in presenting the text of I Act of the drama, with introduction, translation and critical notes both in Kannada and English for the benefit of Sanskrit students of 4$^{th}$ Semester UG classes in general and that of Bangalore City University in particular, as it is the syllabus for UG B.Com IV Sem students prescribed by BOS of the university.

We are indebted mainly to Prof. M.R. Kale edition of this work which has inspired us in bringing out this edition. We express our gratitude to Dr. Chandramouli Naikar, former Chairman of BOS and Dr. Pankaja Nayana, the present chairperson of BOS Sanskrit UG, Bangalore City University. We are grateful to our

teachers Prof. Dr. M.Shivakumaraswamy & Prof. B.G. Srilakshmi for their continuous guidance. We thank all the member of BOS for their encouragement and faith reposed in us.

Our thanks to Kum. B. Hemalatha for this flow free DTP work completed on time.

We extend our immense gratitude to Prof. Lingaraja Gandhi VC of Bengaluru City University for encouraging us in this task of bringing out this edition.

**Prof. Ganesh Kamath M.**
**Associate Prof. & HOD (Rtd.)**
**Department of Sanskrit**
**Govt. Science College.**

**Prof. N.R. Subrahmanya**
**HOD Department of Sanskrit**
**Sindhi College, Bengaluru.**

# ವಿಷಯಾನುಕ್ರಮಣಿಕೆ


| | | ಪುಟ ಸಂಖ್ಯೆ |
|---|---|---|
| 1. | ಮಹಾಕವಿ ವಿಶಾಖದತ್ತ | 1 |
| 2. | ಸಂಕ್ಷಿಪ್ತ ಕಥಾವಸ್ತು | 5 |
| 3. | ಪಾತ್ರಚಿತ್ರಣ | 16 |
| 4. | Mahakavi Vishakadatta | 21 |
| 5. | Brief summary of the Plot | 24 |
| 6. | प्रथमोऽङ्कः | 34 |
| 7. | ಮೊದಲನೆ ಅಂಕದ ಭಾಷಾಂತರ | 58 |
| 8. | Translation - Act - 1 | 87 |
| 9. | Notes/ಟಿಪ್ಪಣಿಗಳು | 121 |
| 10. | ಮಾದರಿ ಪ್ರಶ್ನೆ ಪತ್ರಿಕೆ | 149 |


* * *

# ಮಹಾಕವಿ ವಿಶಾಖದತ್ತ

## ಜೀವನ, ಕಾಲ ಮತ್ತು ಕೃತಿಗಳು

ಪ್ರಾಚೀನ ಕಾಲದಿಂದಲೂ ಸಂಸ್ಕೃತ ಕವಿಗಳು ತಮ್ಮ ಬಗ್ಗೆ ಆತ್ಮವಿಜ್ಞಾಪನೆಯನ್ನು ಮಾಡಿರುವುದು ತುಂಬಾ ವಿರಳ. ಅವರು ಸ್ವವಿವರಗಳ ಬಗ್ಗೆ ಹೆಚ್ಚು ಹೇಳದೆ ಗ್ರಂಥರಚನೆಯಲ್ಲಿ ಉತ್ಕೃಷ್ಟತೆಯನ್ನು ಮೆರೆಯುತ್ತಿದ್ದರು. ಆದ್ದರಿಂದಲೇ ಭಾಸ, ಕಾಳಿದಾಸ, ವಿಶಾಖದತ್ತ ಮೊದಲಾದವರು ತಮ್ಮ ಬಗ್ಗೆ ಹೇಳಿರುವುದು ಕಡಿಮೆ. ಹಾಗಿದ್ದರೂ ನಾಟ್ಯಕಲೆಯ ಅನೇಕ ಆಚಾರ್ಯರು, ನಾಟಕದಲ್ಲಿ ಕವಿ ತನ್ನ ಪರಿಚಯವನ್ನು ಪ್ರಸ್ತಾವನೆಯಲ್ಲಿ ಅವಶ್ಯವಾಗಿ ಮಾಡಬೇಕೆಂಬ ನಿಯಮವನ್ನೇ ಮಾಡಿರುತ್ತಾರೆ. ಅದೇ ರೀತಿ ಮುದ್ರಾರಾಕ್ಷಸ ನಾಟಕದ ಪ್ರಸ್ತಾವನೆಯಿಂದ, ಕವಿಯ ಹೆಸರು ವಿಶಾಖದತ್ತನೆಂದೂ, ಅವನು ಪೃಥು ಎಂಬ ಮಹಾರಾಜನ ಮಗನೆಂದೂ, ಸಾಮಂತ ವಟೇಶ್ವರದತ್ತನ ಮೊಮ್ಮಗನೆಂದೂ ತಿಳಿದುಬರುತ್ತದೆ. ಸಿಕ್ಕಿರುವ ಮುದ್ರಾರಾಕ್ಷಸದ ಕೆಲವು ಪ್ರತಿಗಳಲ್ಲಿ ವಿಶಾಖದತ್ತನ ತಂದೆ ಭಾಸ್ಕರದತ್ತ ಎಂಬ ಹೆಸರು ಉಲ್ಲೇಖವಾಗಿದೆ. ಹೆಸರಿನಲ್ಲಿರುವ "ದತ್ತ" ಎಂಬ ಶಬ್ದದಿಂದ, ಕೆಲವು ವಿದ್ವಾಂಸರ ಪ್ರಕಾರ, ಇವನ ವಂಶ "ದತ್ತವಂಶ", ಒಂದು ಮಂಡಲದ ಒಡೆತನವಿದ್ದಿರಬಹುದು ಎಂದು ತರ್ಕಿಸುತ್ತಾರೆ. ಪೃಥುವಿನ ಇನ್ನೊಂದು ಹೆಸರೇ ಭಾಸ್ಕರದತ್ತ ಎಂದು ಈ ವಿದ್ವಾಂಸರು ತೀರ್ಮಾನಿಸಿರುತ್ತಾರೆ.

ನಾಟಕದ ಭರತವಾಕ್ಯದ ಕೊನೆಯಲ್ಲಿ ಬರುವ 'स श्रीमद्बन्धुभृत्यश्चिरमवतु महीं पार्थिवश्चन्द्रगुप्तः' ಎಂಬ ಮಾತಿನಂತೆ ಕವಿಯು ಶ್ಲೋಕದಲ್ಲಿ ಉಲ್ಲಿಖಿತನಾದ ಚಂದ್ರಗುಪ್ತನ ಸಮಕಾಲೀನ–ನಾಗಿರಬಹುದು. ಆದರೆ ಆ ಚಂದ್ರಗುಪ್ತನು ತನ್ನಿಂದ ರಚಿಸಲ್ಪಟ್ಟ ನಾಟಕದ ಪ್ರಧಾನ ಪಾತ್ರ ಚಂದ್ರಗುಪ್ತ ಮೌರ್ಯನೋ ಅಥವಾ ಗುಪ್ತವಂಶದ ಚಂದ್ರಗುಪ್ತ ವಿಕ್ರಮಾದಿತ್ಯನೋ ಎಂಬುದು ವಿವಾದಾಸ್ಪದವಾಗಿರುತ್ತದೆ. ಕೆಲವರ ಪ್ರಕಾರ ಕವಿಯ ತನ್ನ ನಾಟಕದಲ್ಲಿ ಚಂದ್ರಗುಪ್ತ ಮೌರ್ಯನ ಶಾಸನ ಕಾಲದ ಚಿತ್ರಣವನ್ನು ಮಾಡುತ್ತಾ, ತನಗೆ ಆಶ್ರಯ ನೀಡಿದ ಚಂದ್ರಗುಪ್ತ ವಿಕ್ರಮಾದಿತ್ಯನ (ಕ್ರಿ.ಶ. 4ನೇ ಶತಮಾನ) ಪ್ರಶಂಸೆಯನ್ನು ಮಾಡಿರುತ್ತಾನೆ; ಎಂದು ತರ್ಕಿಸುತ್ತಾರೆ. ನಾಟಕದ ಘಟನಾಸ್ಥಳ ಪಾಟಲೀಪುತ್ರವಾಗಿದ್ದು ಅದು ಮಗಧರಾಜರ ರಾಜಧಾನಿಯಾಗಿತ್ತು. ಬೌದ್ಧಧರ್ಮದ ಬಗ್ಗೆ ಕವಿ ತನ್ನ ನಾಟಕದಲ್ಲಿ ಸೂಕ್ಷ್ಮವಾಗಿ ಉಲ್ಲೇಖಿಸಿರುತ್ತಾರೆ. ಅಂಕ 7 ಶ್ಲೋಕ 5–'बुद्धानामपि चोष्टितं सुचरितैः क्लिष्टं विशुद्धात्मना' ಅಂದರೆ ಅವನು (ಚಂದನದಾಸ) ತನ್ನ ಉತ್ತಮ ನಡವಳಿಕೆಗಳಿಂದ ಬುದ್ಧನ ಸುಚಾರಿತ್ರ್ಯವನ್ನು ಮೀರಿಸುವನು" ಎಂದಿದ್ದಾನೆ.

ಆ ಸಮಯವು ಫಾಹಿಯಾನನು ಭಾರತಕ್ಕೆ ಬಂದ ಸಮಯವಾಗಿತ್ತು, ಈ ಪ್ರಮಾಣದ ಆಧಾರದ ಮೇಲೆ ಕೆಲವು ವಿದ್ವಾಂಸರು "ಮುದ್ರಾರಾಕ್ಷಸ" ನಾಟಕವು ಕ್ರಿ.ಶ. 5ನೇ ಶತಮಾನದ ರಚನೆಯಾಗಿರಬಹುದು ಎನ್ನುತ್ತಾರೆ.

ಭರವಾಕ್ಯದಲ್ಲಿ 'पर्थिवो दन्तिवर्मा, पार्थिवोऽवन्तिवर्मा' ಎಂಬ ಪಾಠಾಂತರಗಳು ಸಿಕ್ಕಿವೆ. ಈ ಅವಂತಿವರ್ಮನು ಹರ್ಷನ ಸಮಕಾಲೀನನಾದ ಗ್ರಹವರ್ಮನ ತಂದೆ ಮೌಖರೀರಾಜ ಅವಂತಿವರ್ಮ ಇರಬಹುದು. ಅದೇ ಸಾಧ್ಯವಾದಲ್ಲಿ ನಾಟಕದ ರಚನಾಕಾಲ ಕ್ರಿ.ಶ. ಏಳನೇ ಶತಮಾನ ಎಂಬ ವಾದವೂ ಕೆಲವು ವಿದ್ವಾಂಸರುಗಳಲ್ಲಿ ಇದೆ.

ಭರತವಾಕ್ಯದಲ್ಲಿ ಬಂದಿರುವ ರಾಜ ಚಂದ್ರಗುಪ್ತ ಎಂಬ ಪಾಠವೇ ಸರಿಯಾಗಿದೆ. ಶ್ಲೋಕವನ್ನು ರಾಕ್ಷಸನು ಪಠಿಸುತ್ತಾನೆ, ಮ್ಲೇಚ್ಛರು ಮತ್ತು ಹೂಣರನ್ನು ಪರಾಭವಗೊಳಿಸಿದ, ಮಗಧ ಅಧಿಪತಿ ಚಂದ್ರಗುಪ್ತ ವಿಕ್ರಮಾದಿತ್ಯನೇ ಎಂದು ಕ್ರಿ.ಶ. ಐದನೇ ಶತಮಾನ ವಿಶಾಖದತ್ತನ ಕಾಲ ಎಂದು ಪ್ರತಿಪಾದಿಸುತ್ತಾರೆ. ಮಗಧದ ಭಾಗವಾಗಿರುವ ಬಂಗಾಳದ ಚಿಕ್ಕ ಪ್ರಾಂತ್ಯವನ್ನು ಮಂಡಲಾಧಿಪರಾಗಿರುವ "ಮಹಾರಾಜ" ಬಿರುದನ್ನು ಪಡೆದ ವಿಶಾಖದತ್ತದ ವಂಶದವರು ಮೇಲ್ವಿಚಾರಣೆ (ರಾಜ್ಯಭಾರ) ಮಾಡುತ್ತಿದ್ದರು ಎಂದು ತೀರ್ಮಾನಿಸಬಹುದು.

ನಾಟಕಕಾರನಾದ ವಿಶಾಖದತ್ತನು ಜನ್ಮಸ್ಥಾನ ಮತ್ತು ಜೀವಿತಕಾಲದ ಬಗ್ಗೆ ಯಾವುದೇ ವಿಚಾರವನ್ನು ಕವಿ ತನ್ನ ಕೃತಿಯಲ್ಲಿ ನಿರೂಪಿಸಿಲ್ಲ. ಗೌಡೀಯಾ ರೀತಿಯ ಬರವಣಿಗೆಯಿಂದ ಕವಿಯು ಗೌಡೀಯದೇಶದವನೆಂದು ಭಾವಿಸಬಹುದು. ಗೌಡದೇಶದ ಸ್ತ್ರೀಯರನ್ನು ನಾಟಕದ 5 ಅಂಕದ गौडानां लोघ्र... पतन्तु ಎಂಬ ಶ್ಲೋಕದಲ್ಲಿ ಕವಿ ವರ್ಣಿಸಿರುವುದು, ಇದನ್ನು ಸಮರ್ಥಿಸುತ್ತದೆ. 'चीयते बालिशस्यापि सत्क्षेत्रपतिताकृषिः' ಎಂಬ ಶ್ಲೋಕದಿಂದ ವಿಶಾಖದತ್ತನು ಭತ್ತ ಅಧಿಕವಾಗಿ ಬೆಳೆಯುವ ಬಿಹಾರ ಅಥವಾ ಬಂಗಾಲ ಪ್ರದೇಶ ಅರ್ಥಾತ್ ಮಗಧ ಮತ್ತು ಬಂಗಾಳ ಪ್ರದೇಶದವನು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕವಿಯು ಬಳಸುವ ಭಾಷೆ ಮತ್ತು ಶೈಲಿ ಈ ಪ್ರಾಂತ್ಯಕ್ಕೆ ಅನುಗುಣವಾಗಿದೆ.

**ಕೃತಿಗಳು :**

1) **मुद्राराक्षसम् :** ವಿಶಾಖದತ್ತನ ಉಪಲಬ್ಧವಿರುವ 7 ಅಂಕಗಳ ನಾಟಕವಿದು. ವಿಶಾಖದತ್ತನು ತನ್ನ ನಾಟಕ "ಮುದ್ರಾರಾಕ್ಷಸ"ದಿಂದ ಅತ್ಯಂತ ಪ್ರಸಿದ್ಧಿಯನ್ನು ಪಡೆದಿರುವನು; ಮುದ್ರಾರಾಕ್ಷಸವೇ ಅವನ ಮೇರುಕೃತಿ.

ಚಂದ್ರಗುಪ್ತನನ್ನು ಮಗಧ ಸಿಂಹಾಸನದಲ್ಲಿ ಕುಳ್ಳಿರಿಸಿದ ಬಳಿಕ, ಆತನಲ್ಲಿ ರಾಜ್ಯಲಕ್ಷ್ಮೀ ಸ್ಥಿರವಾಗಿ ನೆಲೆಸುವಂತೆ ಮಾಡಲು ಚಾಣಕ್ಯನು ಉಪಯೋಗಿಸಿದ ತಂತ್ರ-ಪ್ರತಿತಂತ್ರಗಳೇ ಈ ನಾಟಕದ ಪ್ರಧಾನ ಅಂಶಗಳಾಗಿದೆ. ಅಮಾತ್ಯ ರಾಕ್ಷಸನನ್ನು ಚಂದ್ರಗುಪ್ತನಿಗೆ ನಿಷ್ಠನನ್ನಾಗಿ ಮಾಡಲು ಚಾಣಕ್ಯ ಪಡುವ ಹರಸಾಹಸ, ಅಮಾತ್ಯನ ಮಿತ್ರಪ್ರೇಮ, ಪರಾಕ್ರಮ ಮತ್ತು ಸ್ವಾಮಿನಿಷ್ಠೆ, ಚಾಣಕ್ಯನ ಗೂಢಚಾರರ ಕಾರ್ಯತತ್ಪರತೆ ನಾಟಕವನ್ನು ಜನಪ್ರಿಯಕೃತಿಯಾಗಿ ರೂಪಿಸಿದೆ. ರಾಜನೀತಿ ಪ್ರಧಾನವಾದ ನಾಟಕವಿದು. मुद्रया जितः राक्षसः (मुद्राराक्षसः) यस्मिन् ಎಂಬಂತೆ ರಾಕ್ಷಸನ ಮುದ್ರೆಯುಂಗುರ ಚಾಣಕ್ಯನಿಗೆ, ಚಂದನದಾಸನ ಮನೆಯಲ್ಲಿ ಗೂಢಚಾರನಿಂದ ಪ್ರಾಪ್ತವಾಗಿ ನಾಟಕದ ಫಲೋದ್ದೇಶ ಪ್ರಾಪ್ತಿಗೆ ಪ್ರಧಾನ ಸಾಧನವಾಗುತ್ತದೆ. ಮುದ್ರೆಯುಂಗುರದ ಮೂಲಕ ರಾಕ್ಷಸನನ್ನು ನಿಗ್ರಹಿಸುತ್ತಾನೆ ಚಾಣಕ್ಯ; ಮತ್ತು ತನ್ನ ನಿಸ್ವಾರ್ಥವಾದ ಇಷ್ಟಾರ್ಥವನ್ನು ಸಾಧಿಸುತ್ತಾನೆ.

2) **देवीचन्द्रगुप्तम्**: ರಾಜನೀತಿ ವಿಷಯಕವಾದ ಚಂದ್ರಗುಪ್ತನ ಚರಿತ್ರಚಿತ್ರಣ ಮಾಡುವ ಅನುಪಲಬ್ಧ ಕೃತಿಯಿದು. ನಾಟ್ಯದರ್ಪಣದಲ್ಲಿ ದೇವಿ ಚಂದ್ರಗುಪ್ತದ ಶ್ಲೋಕವೊಂದು ಉದಾಹೃತವಾಗಿದೆ. ಮಾತ್ರವಲ್ಲ, ಭೋಜನ ಶೃಂಗಾರ ಪ್ರಕಾಶದಲ್ಲಿ ಉದಾಹೃತವಾಗಿದೆ.

3) **अभिसारिकावाञ्चितकम् :** ಇದು ನಾಟಕ, ಅನುಪಲಬ್ಧ, ವಿಶಾಖದತ್ತನ ಕೃತಿ ಎಂದು ಮುಂದಿನ ಹಲವರು ಉದಾಹರಿಸಿರುವರು.

4) **राघवानन्दम् :** ಈ ನಾಟಕವು ವಿಶಾಖದತ್ತನದೆಂದು ಹೇಳಲಾಗಿದ್ದರೂ, ಈ ಕೃತಿ ಇನ್ನೂ ಉಪಲಬ್ಧವಾಗಿಲ್ಲ. रामोऽसौ भुवनेषु... ಎಂಬ ಈ ನಾಟಕದ ಶ್ಲೋಕ ಸದುಕ್ತಿ ಕರ್ಣಾಮೃತದಲ್ಲಿ ಉದ್ಧೃತವಾಗಿದೆ. ಈ ಶ್ಲೋಕದ ಆಧಾರದ ಮೇಲೆ ವಿಶಾಖದತ್ತನು ರಾಮಾಯಣವನ್ನು ಆಧಾರವಾಗಿಟ್ಟುಕೊಂಡು ನಾಟಕವನ್ನು ರಚಿಸಿರುವನೆಂದು ತಿಳಿಯುತ್ತದೆ.

ಮುದ್ರಾರಾಕ್ಷಸವನ್ನು ಅಧ್ಯಯನ ಮಾಡಿದಾಗ ಕವಿ ವಿಶಾಖದತ್ತನಿಗೆ ನ್ಯಾಯಶಾಸ್ತ್ರ, ರಾಜನೀತಿಶಾಸ್ತ್ರ ಮತ್ತು ನಾಟ್ಯಶಾಸ್ತ್ರಗಳಲ್ಲಿ ಅತ್ಯಧಿಕ ಪಾಂಡಿತ್ಯವಿತ್ತು ಎಂಬ ಅಂಶ ಗೋಚರವಾಗುತ್ತದೆ. ಪ್ರಸ್ತಾವನೆಯಲ್ಲಿ ಬಂದ क्रूरग्रह सकेतु.. ಶ್ಲೋಕ ನೋಡಿದಾಗ ಕವಿಗೆ ಜ್ಯೋತಿಷ್ಯಶಾಸ್ತ್ರ ಮತ್ತು ಗಣಿತದಲ್ಲಿ ಪಾಂಡಿತ್ಯ ಇತ್ತು ಎಂದು ತಿಳಿಯುತ್ತದೆ. ಹೀಗೆ ನಾಟಕಕಾರನು ಬಹುಮುಖ ಪ್ರತಿಭಾ ಸಂಪನ್ನನಾಗಿದ್ದನು ಎಂಬುದು ಗೋಚರವಾಗುತ್ತದೆ.

# ನಾಟಕದ ಪಾತ್ರವರ್ಗ

**चन्द्रगुप्तः** : ಪಾಟಲೀಪುತ್ರದ ಮಹಾರಾಜ. ಚಾಣಕ್ಯನಿಂದ ಧನನಂದನ ನಾಶವಾದ ಬಳಿಕ ಮಹಾರಾಜನಾಗಿ, ಸಿಂಹಾಸನದಲ್ಲಿ ಸ್ಥಾಪಿಸಲ್ಪಟ್ಟವ. ವೃಷಲನೆಂದೂ, ಮೌರ್ಯನೆಂದೂ ಕರೆಯುವರು. ನಾಯಕ.

**चाणक्यः** : ಬ್ರಾಹ್ಮಣ ರಾಜಕಾರಣಿ. ವಿಷ್ಣುಗುಪ್ತನೆಂದು ಖ್ಯಾತ. ನಂದರ ರಾಜ್ಯದ ಆಳ್ವಿಕೆಯನ್ನು ತನ್ನ ಪ್ರತಿಜ್ಞೆಯಂತೆ ನಾಶ ಮಾಡಿ, ಚಂದ್ರಗುಪ್ತನನ್ನು ಸಾಮ್ರಾಟನನ್ನಾಗಿ ಮಾಡಿದ ಕುಶಾಗ್ರಮತಿ.

**अमात्यराक्षसः** : ನಂದರ ಪ್ರಧಾನ ಅಮಾತ್ಯ. ಸ್ವಾಮಿನಿಷ್ಠ, ನಂದನಿಷ್ಠನಾಗಿದ್ದ ಇವನನ್ನು ಚಂದ್ರಗುಪ್ತನ ಪರವಾಗಿ ಕಾರ್ಯತತ್ಪರನಾಗುವಂತೆ ಮಾಡುವುದೇ ಚಾಣಕ್ಯನ ತಂತ್ರ.

**मलयकेतुः** : ಪರ್ವತಕನ ಮಗ. ರಾಕ್ಷಸನ ಆಪ್ತ ರಾಕ್ಷಸನೊಂದಿಗೆ ಮೈತ್ರಿ ಮಾಡಿಕೊಂಡು ಪಾಟಲೀಪುತ್ರವನ್ನು ಆಕ್ರಮಣ ಮಾಡಲು ಸಿದ್ಧನಾದವನು.

**भागुरायणः** : ಮಲಯಕೇತುವಿನ ಮಿತ್ರ, ಆದರೆ ಚಾಣಕ್ಯನ ಗೂಢಚಾರ.

**निपुणकः जीवसिद्धिः,**

**सिद्धार्थक** : ಚಾಣಕ್ಯನ ಗೂಢಚಾರರು.

**भासुरक** : ಮಲಯಕೇತುವಿನ ಅನುಚರ.

### ಸ್ತ್ರೀಪಾತ್ರಗಳು

**शोणोत्तरा** : ಪ್ರತಿಹಾರೀ–ಚಂದ್ರಗುಪ್ತನ ದ್ವಾರಪಾಲಕಿ

**विजया** : (ವಿಜಯಾ)–ಮಲಯಕೇತುವಿನ ದ್ವಾರಪಾಲಕಿ

**कुटुम्बिनी** : ಕುಟುಂಬಿನೀ–ಚಂದನದಾಸನ ಪತ್ನಿ

# ಸಂಕ್ಷಿಪ್ತ ಕಥಾವಸ್ತು

ಮುದ್ರಾರಾಕ್ಷಸ ನಾಟಕದಲ್ಲಿ ಏಳು ಅಂಕಗಳಿವೆ. ನಾಟಕದ ಕಥಾವಸ್ತುವನ್ನು ಅತ್ಯಂತ ಬುದ್ಧಿವಂತಿಕೆ ಮತ್ತು ಸಫಲತೆಯಿಂದ ಹೆಣೆಯಲಾಗಿದೆ. ಚಾಣಕ್ಯನೇ ಇಲ್ಲಿ ಪ್ರಧಾನ ಪಾತ್ರ. ಮತ್ತು ಅಮಾತ್ಯರಾಕ್ಷಸನೇ ಪ್ರತಿನಾಯಕ. ಚಾಣಕ್ಯನಿಗೆ ಯಾರು ಮಿತ್ರ ಮತ್ತು ಯಾರು ಶತ್ರು ಎಂಬುದು ಕೊನೆಯ ತನಕ ಗೊತ್ತಾಗದ ಹಾಗೆಯೇ ಕುತೂಹಲಕಾರಿಯಾಗಿ ಉಳಿಯುವಂತೆ ಕಥೆಯನ್ನು ವಿಸ್ತರಿಸಲಾಗಿದೆ. ರಾಕ್ಷಸನಾದರೋ ನಂದರ ಹತ್ಯೆಯ ಪ್ರತೀಕಾರಕ್ಕೆ ಉಪಾಯಗಳನ್ನು ಯೋಚಿಸುತ್ತಿದ್ದರೆ, ಚಾಣಕ್ಯನಾದರೋ ತನ್ನ ಕುಶಾಗ್ರಮತಿಯಿಂದ ರಾಕ್ಷಸನನ್ನು ಚಂದ್ರಗುಪ್ತನಿಗೆ ಸ್ವಾಮಿನಿಷ್ಠನನ್ನಾಗಿ ಮಾಡಬೇಕೆಂದು ಪ್ರಯತ್ನಿಸಿ ತಂತ್ರಗಳನ್ನು ರೂಪಿಸಿ ಸಫಲನೂ ಆಗುತ್ತಾನೆ. ಚಾಣಕ್ಯನ ಯೋಚನೆ ಏನೆಂದರೆ, ಅವನು ರಾಕ್ಷಸನನ್ನು ಚಂದ್ರಗುಪ್ತನ ಸೇವೆಯಲ್ಲಿ ಮುಖ್ಯಮಂತ್ರಿಯಾಗಿ ನಿಯೋಜಿಸುವಲ್ಲಿ ಸಫಲನಾದರೆ, ಚಂದ್ರಗುಪ್ತನ ರಾಜ್ಯಲಕ್ಷ್ಮಿ ಸ್ಥಿರವಾಗುವಳು ಮಾತ್ರವಲ್ಲ ನಿಃಸ್ಪೃಹನಾದ ತಾನು ತನ್ನ ಅಧ್ಯಯನ–ಅಧ್ಯಾಪನ ಕಾರ್ಯದಲ್ಲಿ ನಿಶ್ಚಿಂತೆಯಿಂದ ಇರಬಹುದು ಎಂಬುದೇ ಆಗಿದೆ. ತನ್ನ ಮಿತ್ರನಾದ ಚಂದನದಾಸನ ಪ್ರಾಣರಕ್ಷಣೆಗಾಗಿ ಅಮಾತ್ಯ ರಾಕ್ಷಸ ಧಾವಿಸುತ್ತಾನೆ; ಚಾಣಕ್ಯನ ಷರತ್ತುಗಳನ್ನು ಒಪ್ಪುತ್ತಾನೆ.

## ಮೊದಲ ಅಂಕದ ಕಥಾಸಾರಾಂಶ

ತನ್ನ ಇಷ್ಟದೈವವಾದ ಶಿವನನ್ನು ಸ್ವಾರಸ್ಯಕರವಾಗಿ ಸ್ತುತಿಸಿ, ನಟರಾಜನ ನಾಟ್ಯವೈಭವವನ್ನು ಮತ್ತು ಭಕ್ತರ ಮೇಲಿನ ಅವನ ಕಾರುಣ್ಯವನ್ನು ವರ್ಣಿಸಿರುವ ನಾಂದಿಶ್ಲೋಕಗಳ ಬಳಿಕ ಸೂತ್ರಧಾರನು ರಂಗವನ್ನು ಪ್ರವೇಶಿಸುತ್ತಾನೆ. ತಾನು ತನ್ನ ತಂಡದೊಂದಿಗೆ ವಟೇಶ್ವರದತ್ತನ ಮೊಮ್ಮಗನೂ, ಪೃಥು ಮಹಾರಾಜನ ಮಗನೂ ಆದ ವಿಶಾಖದತ್ತನಿಂದ ರಚಿತವಾದ ಮುದ್ರಾರಾಕ್ಷಸವೆಂಬ ನಾಟಕವನ್ನು ಅತ್ಯಂತ ಪರಿಣತಿವುಳ್ಳ ಸಭಿಕರ ಮುಂದೆ ಅಭಿನಯಿಸುತ್ತೇವೆಂದು ಹೇಳುತ್ತಾನೆ. ಪತ್ನಿಯನ್ನು (ನಟಿ) ಕರೆಯಲು ಮನೆಗೆ ಬರುತ್ತಾನೆ. ಮನೆಯಲ್ಲಿ ಬ್ರಾಹ್ಮಣರಿಗೆ ಭೋಜನದ ವ್ಯವಸ್ಥೆಯ ಸಿದ್ಧತೆಯಲ್ಲಿದ್ದ ಪತ್ನಿಯನ್ನು ಕೇಳಲು, ಚಂದ್ರಗ್ರಹಣ ನಿಮಿತ್ತ ಬ್ರಾಹ್ಮಣರಿಗೆ ಭೋಜನದ ವ್ಯವಸ್ಥೆಯ ಸಿದ್ಧತೆ ಮಾಡಲಾಗಿದೆ ಎನ್ನುತ್ತಾಳೆ; ಅವನ ಪತ್ನಿಯ ಚಂದ್ರಗ್ರಹಣವೆಂಬ ಶಬ್ದ ಕೇಳಿದ ಕೂಡಲೇ ತೆರೆಯ ಹಿಂದೆ ನಾನು ಇನ್ನು ಜೀವಿಸಿರಲು ಯಾರು ತಾನೇ ಚಂದ್ರನನ್ನು (ಚಂದ್ರಗುಪ್ತ) ಆಕ್ರಮಣ ಮಾಡಲು ಬಯಸುವರು ಎಂಬ ಮಾತು ಕೇಳಿಬರುತ್ತದೆ. ಚಾಣಕ್ಯನ ಈ ಘರ್ಜನೆಯನ್ನು ಕೇಳಿ ಸೂತ್ರಧಾರ ಮತ್ತು ನಟಿ ರಂಗದಿಂದ ನಿರ್ಗಮಿಸಿ, ಚಾಣಕ್ಯನ ರಂಗಪ್ರವೇಶಕ್ಕೆ ಅನುವು ಮಾಡಿಕೊಡುತ್ತಾರೆ. ಬಿಚ್ಚಲ್ಪಟ್ಟ ತನ್ನ ಶಿಖೆಯನ್ನು

ಸ್ಪರ್ಶಿಸುತ್ತಾ, ಚಾಣಕ್ಯ ತನ್ನ ನಂದವಂಶನಾಶವೆಂಬ ಮತ್ತು ಚಂದ್ರಗುಪ್ತನ ರಾಜ್ಯದ ಸ್ಥಾಪನೆ ಎಂಬ ಸಾಧನೆಯನ್ನು ಮೆಲುಕು ಹಾಕುತ್ತಾನೆ.

ನಂದರ ನಾಶದ ಬಳಿಕವೂ ನಂದರಿಗೆ ಸ್ವಾಮಿ ನಿಷ್ಠತೆಯಿಂದ ಇರುವ ಅಮಾತ್ಯರಾಕ್ಷಸನ ಸ್ವಾಮಿಭಕ್ತಿಯನ್ನು ಕೊಂಡಾಡುತ್ತಾನೆ. ಜಾಣ್ಮೆ, ಪರಾಕ್ರಮ ಮತ್ತು ಸ್ವಾಮಿನಿಷ್ಠೆಯುಳ್ಳ ಅಮಾತ್ಯ ರಾಕ್ಷಸನನ್ನು ಹೇಗಾದರೂ ಮಾಡಿ ಚಂದ್ರಗುಪ್ತನ ಪರವಾಗಿ ಮಂತ್ರಿ ಮಾಡುವುದೇ ತನ್ನ ಪರಮಧ್ಯೇಯ ಎನ್ನುತ್ತಾನೆ. ಈ ನಿಟ್ಟಿನಲ್ಲಿ ತನ್ನ ಯೋಜನೆಯನ್ನು ವರ್ಣಿಸುತ್ತಾನೆ. ಪ್ರಜೆಗಳಲ್ಲಿ ರಾಕ್ಷಸನೇ ಪರ್ವತಕನನ್ನು ವಿಷಕನ್ಯೆಯ ಮೂಲಕ ಕೊಂದಿರುವನು ಎಂದು ವದಂತಿ ಹಬ್ಬಿಸುತ್ತಾನೆ. ಭಾಗುರಾಯಣನ ಮೂಲಕ ಪರ್ವತಕನ ಪುತ್ರ ಮಯಕೇತುವಿಗೆ ಚಾಣಕ್ಯನೇ ತನ್ನ ತಂದೆಯನ್ನು ಕೊಲ್ಲಿಸಿರುವನೆಂದು ವಿಶ್ವಾಸ ಬರುವಂತೆ ಹೇಳಿಸಿ, ತನ್ಮೂಲಕ ಮಲಯಕೇತು ಪಾಟಲೀಪುತ್ರ ಬಿಟ್ಟು ತನ್ನ ರಾಜ್ಯಕ್ಕೆ ಮರಳುವಂತೆ ಮಾಡುತ್ತಾನೆ. ಚಾಣಕ್ಯನು ತನ್ನ ಮಿತ್ರ ಇಂದುಶರ್ಮ ಎಂಬ ಬ್ರಾಹ್ಮಣನನ್ನು ಜೈನಸಂನ್ಯಾಸಿಯಾಗಿ ಮಾಡಿಸಿ, ಕುಸುಮಪುರಕ್ಕೆ ಕಳುಹಿಸಿ, ಅಮಾತ್ಯ ರಾಕ್ಷಸನ ವಿಶ್ವಾಸಕ್ಕೆ ಪಾತ್ರನಾಗುವಂತೆ ಮಾಡಿಸಿ, ಅವನ ಎಲ್ಲಾ ತಂತ್ರ/ಯೋಜನೆಗಳನ್ನು ತಿಳಿದು ಪ್ರತಿತಂತ್ರ ರೂಪಿಸುತ್ತಾನೆ.

ನಂತರದ ದೃಶ್ಯದಲ್ಲಿ ಯಮಪಟವನ್ನು ಹಿಡಿದ ಯೋಗಿಯ ವೇಷದಲ್ಲಿ ಚಾಣಕ್ಯನ ಗೂಢಚಾರ ನಿಪುಣಕನ ರಂಗಪ್ರವೇಶವಾಗುತ್ತದೆ. ಅವನು ಚಾಣಕ್ಯನಿಗೆ ರಾಜ್ಯದಲ್ಲಿ ವಾಸಿಸುವ ಚಂದ್ರಗುಪ್ತನ ಆಳ್ವಿಕೆಯನ್ನು ವಿರೋಧಿಸುವ ಮತ್ತು ಅಮಾತ್ಯರಾಕ್ಷಸನ ಸಹಾಯಕರಾಗಿರುವ ಮೂವರು ವ್ಯಕ್ತಿಗಳ ಹೆಸರುಗಳನ್ನು ಮತ್ತು ತಾನು ಅದನ್ನು ತಿಳಿದುಕೊಂಡ ಬಗೆಯನ್ನು ಸವಿಸ್ತಾರವಾಗಿ ಚಾಣಕ್ಯನಿಗೆ ತಿಳಿಸುತ್ತಾನೆ. ಆ ಮೂವರು ಯಾರೆಂದರೆ, ಜೀವಸಿದ್ಧಿ ಎಂಬ ಕ್ಷಪಣಕ, ಅಮಾತ್ಯನ ಮಿತ್ರ ಶಕಟದಾಸ ಮತ್ತು ರಾಕ್ಷಸನ ಗೃಹಪರಿವಾರದವರಿಗೆ ತನ್ನ ಮನೆಯಲ್ಲಿ ರಕ್ಷಣೆ ಕೊಟ್ಟ ಚಂದನದಾಸನೆಂಬ ರತ್ನವ್ಯಾಪಾರಿ. ಚಂದನದಾಸನ ಮನೆಯಲ್ಲಿ ಅಕಸ್ಮಾತ್ತಾಗಿ ತನಗೆ ದೊರೆತ ರಾಕ್ಷಸನ ಮುದ್ರೆಯುಂಗುರವನ್ನು ಚಾಣಕ್ಯನಿಗೆ ನೀಡುತ್ತಾನೆ. ಅದನ್ನು ಪಡೆದ ಚಾಣಕ್ಯ ಪ್ರಸನ್ನನಾಗುತ್ತಾನೆ.

ಈ ಮಧ್ಯೆ ಚಾಣಕ್ಯನಿಗೆ ಈ ಸೂಚನೆ ಸಿಗುತ್ತದೆ, ಅದು ಮಹಾರಾಜ ಚಂದ್ರಗುಪ್ತನು ಪರ್ವತಕನ ಶ್ರಾದ್ಧ ಕ್ರಿಯೆಗಳನ್ನು ಮಾಡಲು ಬಯಸುವನು ಮತ್ತು ಈ ನಿಮಿತ್ತ ಬ್ರಾಹ್ಮಣರಿಗೆ ದಕ್ಷಿಣೆಯಾಗಿ ಅವನ ಆಭರಣಗಳನ್ನು ನೀಡುತ್ತಾನೆ ಎಂದು. ಪರ್ವತಕನು ಧರಿಸಿದ ಆಭರಣಗಳನ್ನು ದಾನವಾಗಿ ಪಡೆಯಲು ಚಾಣಕ್ಯನು ಮೂರು ಬ್ರಾಹ್ಮಣರನ್ನು ಕಳುಹಿಸುತ್ತಾನೆ. ಚಾಣಕ್ಯನ ಮುಂದಿನ ತಂತ್ರ ಬಲುರೋಚಕವಾಗಿದೆ.

ರತ್ನ ವ್ಯಾಪಾರಿ ಚಂದನದಾಸನನ್ನು ತನ್ನ ಕುಟೀರಕ್ಕೆ ಕರೆಸುತ್ತಾನೆ. ರಾಕ್ಷಸನ ಪರಿವಾರ ನಿನ್ನ ಮನೆಯಲ್ಲಿದೆ, ತತ್‌ಕ್ಷಣವೇ ತಂದೊಪ್ಪಿಸು ಎನ್ನುತ್ತಾನೆ. ಚಂದನದಾಸ ಅದಕ್ಕೆ ಪ್ರತ್ಯುತ್ತರವಾಗಿ ರಾಕ್ಷಸನ ಗೃಹಜನ ತನ್ನ ಮನೆಯಲ್ಲಿ ಇಲ್ಲ, ಒಂದು ವೇಳೆ ಇದ್ದರೂ ರಾಜನಿಗೆ ಒಪ್ಪಿಸುವುದಿಲ್ಲ ಎನ್ನುತ್ತಾನೆ. ಈ ಉತ್ತರದಿಂದ ಚಾಣಕ್ಯ ಕುಪಿತನಾಗಿ ರಾಜದ್ರೋಹದ ಆರೋಪ ಹೊರಿಸಿ ಅವನನ್ನು ಕಾರಾಗೃಹಕ್ಕೆ ಕಳುಹಿಸುವಂತೆ, ಮತ್ತು ಅವನ ಸಂಪತ್ತನ್ನು ಜಪ್ತಿ ಮಾಡುವಂತೆ ಆದೇಶಿಸುತ್ತಾನೆ.

ಅಷ್ಟರಲ್ಲಿ ತೆರೆಯ ಹಿಂದೆ ಕೋಲಾಹಲ ಏರ್ಪಡುತ್ತದೆ. ಶಿಷ್ಯನ ಮೂಲಕ ಚಾಣಕ್ಯನಿಗೆ ಈ ವಿಷಯ ತಿಳಿಯುತ್ತದೆ, ಏನೆಂದರೆ, ಶಕಟದಾಸನನ್ನು ವಧಾಸ್ಥಾನದಿಂದ ಬಿಡಿಸಿಕೊಂಡು ಸಿದ್ಧಾರ್ಥಕನು ಓಡಿಹೋಗಿದ್ದಾನೆ ಎಂದು ಚಾಣಕ್ಯ ಇದನ್ನು ಅರಿತು ಸುಪ್ರಸನ್ನನಾಗುತ್ತಾನೆ. ಏಕೆಂದರೆ ಅದು ಚಾಣಕ್ಯನ ಕಾರ್ಯತಂತ್ರದ ಯೋಜನೆಯೇ ಆಗಿದೆ. ಚಾಣಕ್ಯನ ಅಣತಿಯಂತೆ ಸಿದ್ಧಾರ್ಥಕನು ಶಕಟದಾಸನನ್ನು ಬಿಡಿಸಿಕೊಂಡು ಹೋಗಿ ರಾಕ್ಷಸನ ವಿಶ್ವಾಸಕ್ಕೆ ಯೋಗ್ಯನಾಗುತ್ತಾನೆ ಮತ್ತು ರಾಕ್ಷಸನ ಯೋಜನೆಗಳನ್ನು, ರಹಸ್ಯವಾಗಿ ಚಾಣಕ್ಯನಿಗೆ ತಿಳಿಸುತ್ತಾನೆ. ಹೀಗೆ ನಾಟಕದ ಪೂರ್ಣ ಉದ್ದೇಶ ಈಡೇರಲು ಮೊದಲ ಅಂಕ ಪೂರ್ಣ ವೇದಿಕೆಯನ್ನು ಸಿದ್ಧಪಡಿಸುತ್ತದೆ. ಚಾಣಕ್ಯನ ತಂತ್ರ–ಪ್ರತಿತಂತ್ರಗಳ ಸರಮಾಲೆ ಇಲ್ಲಿ ತೆರೆಯುತ್ತದೆ. ಆಚಾರ್ಯ ಚಾಣಕ್ಯನ ನಿಸ್ಪೃಹತೆ, ಚಾಕಚಾಕ್ಯತೆ ಮತ್ತು ರಾಷ್ಟ್ರದ ಒಳಿತಿಗೆ ಅವನ ಚಿಂತನೆ ವಿಸ್ತಾರವಾಗಿ ಮೂಡಿ ಬಂದಿದೆ. ಚಂದನದಾಸನ ಮನೆಯಲ್ಲಿ ಸಿಕ್ಕಿದ ರಾಕ್ಷಸನ ಮುದ್ರೆಯುಂಗುರ ಚಾಣಕ್ಯನಿಗೆ ತನ್ನ ರಾಜಕೀಯ ದಾಳವನ್ನು ಉರುಳಿಸಿ, ರಾಕ್ಷಸನನ್ನು, ಚಂದ್ರಗುಪ್ತನಿಗೆ ನಿಷ್ಠನನ್ನಾಗಿ ಮಾಡುವ ಪರಮೋದ್ದೇಶವನ್ನು, ಸಾಧಿಸಲು ಸಹಾಯಕವಾಗುತ್ತದೆ.

**ಎರಡನೇ ಅಂಕ :**

ಮೊದಲ ಅಂಕದಲ್ಲಿ ಚಾಣಕ್ಯನೇ ಪ್ರಧಾನ ಪಾತ್ರ, ಅವನ ತಂತ್ರ, ಕುಟಿಲ ರಾಜನೀತಿ ಮತ್ತು ಗೂಢಚಾರರ ಜಾಲ ಹಾಗೂ ರಾಕ್ಷಸನ ಸ್ವಾಮಿನಿಷ್ಠೆಯನ್ನು ಚಂದ್ರಗುಪ್ತನ ಪರವಾಗಿ ಮಾಡಲು ಅವನು ನಡೆಸುವ ಪ್ರಯತ್ನ ಚಿತ್ರಿತವಾಗಿದ್ದರೆ, ಎರಡನೇ ಅಂಕದಲ್ಲಿ ರಾಕ್ಷಸನು ಚಂದ್ರಗುಪ್ತನನ್ನು, ಸ್ಥಾನಭ್ರಷ್ಟನಾಗಿ ಮಾಡಲು ನಡೆಸಿದ ಪ್ರಯತ್ನಗಳು ವರ್ಣಿತವಾಗಿವೆ. ತನ್ನ ಗೂಢಚಾರರನ್ನು ಪಾಟಲೀಪುತ್ರದಲ್ಲಿ ಎಲ್ಲ ಕಡೆ ತಿರುಗುವಂತೆ ಮಾಡಿ, ಅವರ ಮೂಲಕ ವಿಷಯ ಸಂಗ್ರಹ ಮಾಡುತ್ತಾನೆ ರಾಕ್ಷಸ; ವಿರಾಧಗುಪ್ತನೆಂಬ ರಾಕ್ಷಸನ ಸೇವಕನು ಜೀರ್ಣವಿಷ ಎಂಬ ಹೆಸರಿನ ಹಾವಾಡಿಗನ ವೇಷದಲ್ಲಿ ಬಂದು ರಾಕ್ಷಸನು ಚಂದ್ರಗುಪ್ತನನ್ನು ಕೊಲ್ಲಲು ಮಾಡಿದ

ಎಲ್ಲಾ ಪ್ರಯತ್ನಗಳು ಚಾಣಕ್ಯನ ಚಾಣಾಕ್ಷತೆಯಿಂದ ಹೇಗೆ ವ್ಯರ್ಥವಾದವು ಎಂದು ವರ್ಣಿಸುತ್ತಾನೆ. ಪರ್ವರ್ತಕ ವೈರೋಚನ ಮತ್ತು ದಾರುವರ್ಮ ಇವರ ಮರಣ ಮತ್ತು ಕಾಯಸ್ಥ ಶಕಟದಾಸ ರಾಜದ್ರೋಹದ ಅಪರಾಧದ ಮೇಲೆ ಬಂಧಿತನಾಗಿರುವುದನ್ನು ತಿಳಿಸುತ್ತಾನೆ. ಚಾಣಕ್ಯನ ಅಂತರಂಗದ ಗೂಢಚಾರನಾದ ಸಿದ್ಧಾರ್ಥಕ ತನ್ನ ಸ್ವಾಮಿಯ ಅಣತಿಯಂತೆ, ಶಕಟದಾಸನನ್ನು, ವಧ್ಯಸ್ಥಾನದಿಂದ ಬಿಡುಗಡೆ ಮಾಡಿಸಿ, ರಾಕ್ಷಸನ ಬಳಿ ಕರೆದು ತರುತ್ತಾನೆ. ಸಂತುಷ್ಟನಾದ ರಾಕ್ಷಸ ತನ್ನ ಮೈ ಮೇಲಿನ ಬೆಲೆ ಬಾಳುವ ಆಭರಣಗಳನ್ನು ತೆಗೆದು ಈ ಕಾರ್ಯಕ್ಕೆ ಉಡುಗೊರೆಯಾಗಿ ಸಿದ್ಧಾರ್ಥಕನಿಗೆ ಕೊಡುತ್ತಾನೆ. ಈ ಆಭರಣಗಳಾದರೋ ರಾಕ್ಷಸನಿಗೆ ಅವನ ಮಿತ್ರ ಮಲಯಕೇತು ಅಲಂಕಾರ ಮಾಡಲು ಕೊಟ್ಟಿದ್ದ. ಸಿದ್ಧಾರ್ಥಕನು ಈ ಆಭರಣಗಳನ್ನು ಪೆಟ್ಟಿಗೆಯಲ್ಲಿ ಹಾಕಿ, ರಾಕ್ಷಸನ ಮುದ್ರೆಯುಂಗರದಿಂದ ಒತ್ತಿ ಮುಚ್ಚುತ್ತಾನೆ. ರಾಕ್ಷಸನು ಪ್ರಶ್ನಿಸಲು, ಅದು ತನಗೆ ಚಂದನದಾಸನ ಮನೆಯ ಸಮೀಪದಲ್ಲಿ ದೊರಕಿತೆಂದು ಹೇಳಿ, ಅದನ್ನು ರಾಕ್ಷಸನಿಗೆ ಒಪ್ಪಿಸುತ್ತಾನೆ, ರಾಕ್ಷಸನಾದರೋ ಮುದ್ರೆಯುಂಗುರವನ್ನು ಶಕಟದಾಸನಿಗೆ ನೀಡುತ್ತಾನೆ. ಚಾಣಕ್ಯನ ಗೂಢಚಾರನಾಗಿದ್ದರೂ, ಅವನ ಅಣತಿಯಂತೆ ರಾಕ್ಷಸನ ಬಳಿ ಇದ್ದು ವಿಶ್ವಾಸಕ್ಕೆ ಪಾತ್ರನಾಗುತ್ತಾನೆ; ರಾಕ್ಷಸನ ಸೇವೆ ಮಾಡಿದಂತೆ ನಾಟಕವಾಡುತ್ತಾನೆ. ಭಾವುಕತೆಯಿಂದ ಸಿದ್ಧಾರ್ಥಕನನ್ನು ಪರೀಕ್ಷಿಸದೆ, ಕೇವಲ ಶಕಟದಾಸನನ್ನು ರಕ್ಷಿಸಿದ್ದಾನೆ ಎಂಬ ಕಾರಣಕ್ಕೆ ರಾಕ್ಷಸನು ಅವನಿಗೆ ಆಶ್ರಯ ಕೊಡುತ್ತಾನೆ.

**ಮೂರನೇ ಅಂಕ :**

ನಾಟಕದ ಮೂರನೇ ಅಂಕದ ಆರಂಭದಲ್ಲಿ ಕಾಂಚುಕೀಯನ ಪ್ರವೇಶ ಆಗುತ್ತದೆ. ಶರತ್‌ಕಾಲದ ಕಾರ್ತೀಕ ಮಾಸದ ಪೌರ್ಣಮಿಯಂದು ನಡೆಸಲಾಗುವ ಕೌಮುದೀ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸಬೇಕೆಂದು ರಾಜಾಜ್ಞೆಯಾಗಿರುವುದನ್ನು ಕಂಚುಕೀ ತಿಳಿಸುತ್ತಾನೆ. ಆದರೆ ಆಚಾರ್ಯ ಚಾಣಕ್ಯ ಈ ಉತ್ಸವವನ್ನು ನಿಷೇಧಿಸಿದ್ದಾನೆ. ತನ್ನ ಅರಮನೆಯ ಉಪ್ಪರಿಗೆಯ ಮೇಲೆ ನಿಂತು ಕುಸುಮಪುರದಲ್ಲಿ ಉತ್ಸವದ ಯಾವುದೇ ಲಕ್ಷಣಗಳು ಕಾಣದೆ ಚಂದ್ರಗುಪ್ತನು ಕಂಚುಕಿಯನ್ನು ಕೇಳಿ, ಅದು ಗುರುಗಳ ಚಾಣಕ್ಯರ ಆಜ್ಞೆಯಂತೆ ಪ್ರತಿಷೇಧವಾಗಿರುವುದನ್ನು ತಿಳಿಯುತ್ತಾನೆ. ಚಾಣಕ್ಯನಿಗೆ ಕರೆ ಹೋಗುತ್ತದೆ. ಅವರಿಬ್ಬರ ನಡುವೆ ಅಂತಃ ಕಲಹ ಉಂಟಾಗುತ್ತದೆ. ಚಾಣಕ್ಯ ಆತನಿಗೆ ಆಂತರ್ಯದಲ್ಲಿ ಮೊದಲೇ ತಿಳಿಸಿರುವಂತೆ ಇದು ಕಪಟ ಕಲಹ ಆಗಿರುತ್ತದೆ, ಇದರ ಉದ್ದೇಶ ಪ್ರತಿಪಕ್ಷ ರಾಕ್ಷಸ–ಮಲಯಕೇತು ಇವರಲ್ಲಿ ಪರಸ್ಪರ ಗೊಂದಲವನ್ನು

ಉಂಟು ಮಾಡುವುದೇ ಆಗಿರುತ್ತದೆ. ಮಂತ್ರಿ ಸೇನಾಧಿಪತಿ ಮೊದಲಾದವರ ಸಮ್ಮುಖದಲ್ಲಿ ರಾಜ ಮಂತ್ರಿಯನ್ನು ನಿಂದಿಸುತ್ತಾನೆ; ತ್ಯಜಿಸುತ್ತಾನೆ. ಚಾಣಕ್ಯ ಶಸ್ತ್ರ ತ್ಯಾಗ ಮಾಡಿ ರಂಗದಿಂದ ನಿರ್ಗಮಿಸುತ್ತಾನೆ. ಇಂದಿನಿಂದ ತಾನು ಸರ್ವತಂತ್ರ ಸ್ವತಂತ್ರವಾಗಿ ರಾಜ್ಯ ಆಳುತ್ತೇನೆ ಎಂದು ಪ್ರಜೆಗಳ ಸಮ್ಮುಖದಲ್ಲಿ ಚಂದ್ರಗುಪ್ತ ಘೋಷಿಸುತ್ತಾನೆ.

**ನಾಲ್ಕನೇ ಅಂಕ :**

ಭೀತನಾದ ಕರಭಕನ ಪ್ರವೇಶದಿಂದ ನಾಲ್ಕನೇ ಅಂಕವು ಆರಂಭಗೊಳ್ಳುತ್ತದೆ. ಅವನು ರಾಕ್ಷಸನನ್ನು ಭೇಟಿ ಆಗಲು ಬಯಸುತ್ತಾನೆ. ದ್ವಾರಪಾಲಕನು "ರಾಕ್ಷಸನು ರಾತ್ರಿ ಬಹಳ ಹೊತ್ತು ಜಾಗ್ರತನಾಗಿದ್ದ, ವಿಪರೀತ ತಲೆನೋವಿನಿಂದ ಬಳಲುತ್ತಿದ್ದಾನೆ ಸಮಯ ನೋಡಿ ಭೇಟಿ ಮಾಡಿಸುತ್ತೇನೆ" ಎನ್ನುತ್ತಾನೆ. ಸ್ವಲ್ಪ ಸಮಯದ ಬಳಿಕ ಕರಭಕನಿಗೆ ರಾಕ್ಷಸನ ಭೇಟಿಗೆ ಒಳಗೆ ಕಳುಹಿಸುತ್ತಾನೆ. ಅಷ್ಟರಲ್ಲಿ ರಾಕ್ಷಸನ ಶಿರೋವೇದನೆಯ ವಿಷಯ ಕೇಳಿ ಕಂಚುಕಿ, ಭಾಗುರಾಯಣ, ದಾರಿಮಧ್ಯದಲ್ಲಿ ರಾಕ್ಷಸ ಮತ್ತು ಮಲಯಕೇತುವಿನ ನಡುವೆ ಬಿರುಕು ಉಂಟು ಮಾಡುವ ಕೆಲವು ವಿಷಯಗಳನ್ನು ರಾಕ್ಷಸನ ಬಗ್ಗೆ ಸಂದೇಹ ಬರುವಂತೆ ತಿಳಿಸುತ್ತಾನೆ. ಹಾಗಾಗಿ ಯಾವಾಗ ಅವರು ರಾಕ್ಷಸನ ಭೇಟಿ ಮಾಡಲು ಅವನ ಮನೆಯನ್ನು ತಲುಪಿದರೋ ಆಗ ಅಲ್ಲಿ ಒಳಗೆ ನಡೆದ ಕರಭಕ ಮತ್ತು ರಾಕ್ಷಸನ ಮಾತುಕತೆಯನ್ನು ರಹಸ್ಯವಾಗಿ ಕೇಳುತ್ತಾರೆ.

ಕರಭಕನು ರಾಕ್ಷಸನಿಗೆ ಕುಸುಮಪುರದಲ್ಲಿ ಚಾಣಕ್ಯ ಮತ್ತು ಚಂದ್ರಗುಪ್ತನ ನಡುವೆ ಕೌಮುದಿ ಮಹೋತ್ಸವದ ಆಚರಣೆ ಕುರಿತು ನಡೆದ ವೈಮನಸ್ಯ, ಅಂತಃಕಲಹವನ್ನು ವರ್ಣಿಸುತ್ತಾನೆ. ರಾಕ್ಷಸ ಇದನ್ನು ಮೊದಲು ನಂಬುವುದಿಲ್ಲ; ಆದರೆ ಶಕಟದಾಸ ರಾಕ್ಷಸನಿಗೆ ಚಾಣಕ್ಯ ಮತ್ತು ಚಂದ್ರಗುಪ್ತನ ನಡುವೆ ಜಗಳ ನಡೆಯುವ ಸಾಧ್ಯತೆಯನ್ನು ಸಮರ್ಥಿಸುತ್ತಾನೆ. ಮಾತ್ರವಲ್ಲ ಚಾಣಕ್ಯ ಚಂದ್ರಗುಪ್ತನನ್ನು ಬಿಟ್ಟು ತಪಸ್ಸು ಮಾಡಲು ಹೋಗಿದ್ದಾನೆ ಎನ್ನುತ್ತಾನೆ.

ರಾಕ್ಷಸನಿಗೆ ಇದರಿಂದ ಸಂತಸ ಉಂಟಾಗಿ, ಚಂದ್ರಗುಪ್ತನ ಮೇಲೆ ದಂಡೆತ್ತಿ ಹೋಗಲು ಇದೇ ಸುಸಮಯ ಎನ್ನುತ್ತಾನೆ. ಅಷ್ಟರಲ್ಲಿ ಕ್ಷಪಣಕ ಬರುತ್ತಾನೆ. ಕ್ಷಪಣಕನು ಆಂತರ್ಯದಲ್ಲಿ ಚಾಣಕ್ಯನ ಗೂಢಚಾರನಾಗಿರುವುದರಿಂದ, ರಾಕ್ಷಸ ದಂಡಯಾತ್ರೆಗೆ ಶುಭಮುಹೂರ್ತವನ್ನು ಕೇಳುತ್ತಾನೆ. ಕ್ಷಪಣಕ ಜೀವಸಿದ್ಧಿಯು ಅಶುಭ ಮುಹೂರ್ತ ನೀಡುತ್ತಾನೆ ಮಾತ್ರವಲ್ಲ ರಾಕ್ಷಸ ಸಂದೇಹ ವ್ಯಕ್ತಪಡಿಸಿದಾಗ

एका गुणा तिथि... ಎಂದು ಲಗ್ನದ ಮಹತ್ವವನ್ನು ತಿಳಿಸುತ್ತಾನೆ; ಲಗ್ನದ ಆಧಾರದಲ್ಲಿ ತಾನು ಶುಭದಿನ ಹೇಳಿರುವೆನೆಂದು ತಿಳಿಸುತ್ತಾನೆ. ಅಷ್ಟರಲ್ಲಿ ಸೂರ್ಯಾಸ್ತವಾಗುವುದರಿಂದ ಅಂಕಕ್ಕೆ ತೆರೆ ಬೀಳುತ್ತದೆ.

**ಐದನೇ ಅಂಕ :**

ಐದನೇ ಅಂಕವು ಮಲಯಕೇತುವಿನ ರಾಜ್ಯದಲ್ಲಿ (ಶಿಬಿರದಲ್ಲಿ) ನಡೆಯುವ ಘಟನೆಗಳನ್ನು ವರ್ಣಿಸುತ್ತದೆ. ರಾಕ್ಷಸನೂ ಕೂಡಾ ಅವನ ಆಶ್ರಯದಲ್ಲಿ ಇರುತ್ತಾನೆ; ಕುಸುಮಪುರವು ಮಗಧದ ರಾಜಧಾನಿಯಿಂದ ದೂರವಿದೆ; ಅವನ ರಾಜ್ಯ. ಅಮಾತ್ಯರಾಕ್ಷಸನ ವಿಶ್ವಾಸಪಡೆದ ಜೀವಸಿದ್ಧಿ ಎಂಬ ಕ್ಷಪಣಕ, ಸಿದ್ಧಾರ್ಥಕನೊಂದಿಗೆ ಸಂಭಾಷಣೆ ಮಾಡುತ್ತಾನೆ. ಭಾಗುರಾಯಣನಿಗೆ ತಾನು ಶಿಬಿರವನ್ನು ಬಿಟ್ಟು ಹೋಗಲು ಕೋರಿಕೆ ಸಲ್ಲಿಸುತ್ತಾನೆ. ಚಾಣಕ್ಯನ ಗೂಢಚಾರರು ಎಲ್ಲಾ ಕಡೆ ವ್ಯಾಪಕವಾಗಿ ಹರಡಿ ಹಂಚಿ ಹೋಗಿದ್ದರಿಂದ ಮಲಯಕೇತು ಶಿಬಿರದಲ್ಲಿ, ಬಂದು-ಹೋಗುವವರ ಕುರಿತು ನಿಗಾ ಹಿಡಿಯಲು ಸೂಚಿಸಲಾಗಿತ್ತು ಮತ್ತು ಭಾಗುರಾಯಣ ಪ್ರವೇಶ-ನಿರ್ಗಮನ ದ್ವಾರದ ಮುಖ್ಯ ಅಧಿಕಾರಿಯಾಗಿದ್ದ ರಾಕ್ಷಸನನ್ನು ತ್ಯಜಿಸಲು ಕಾರಣವೇನೆಂದು ಕೇಳಿದಾಗ "ರಾಕ್ಷಸನ ನಡವಳಿಕೆಯ" ಬಗ್ಗೆ ಸಂದೇಹದ ಬೀಜಗಳನ್ನು ಬಿತ್ತಿ ತಾನು ಅವನ ಸಂಗ ತ್ಯಜಿಸುತ್ತೇನೆ ಎಂದು ಭಾಗುರಾಯಣನಿಗೆ ಹೇಳುತ್ತಾನೆ. ಈ ಸಂಭಾಷಣೆಯನ್ನು ಮಲಯಕೇತು ಕಿವಿಗೊಟ್ಟು ಕೇಳುತ್ತಾನೆ, ಭಾಗುರಾಯಣ ಇದು ಸಾಧ್ಯ ಎನ್ನುತ್ತಾ ಮಲಯಕೇತುವಿಗೆ ಪರ್ವತಕನ ಬಳಿ ವಿಷಕನ್ಯೆ ಕಳುಹಿಸಿ ಸಾವಿಗೆ ಕಾರಣನಾದವನು ರಾಕ್ಷಸನೇ ಹೊರತು ಚಾಣಕ್ಯನಲ್ಲ ಎಂದು ಮಲಯಕೇತುವಿಗೆ ರಾಕ್ಷಸನ ಮೇಲೆ ಸಂದೇಹ ಬರುವಂತೆ ಮಾಡುತ್ತಾನೆ. ಸಿದ್ಧಾರ್ಥಕ ಆಭರಣಗಳ ಪೆಟ್ಟಿಗೆ ಸಮೇತ ಹೊರ ಹೋಗಲು ಪ್ರಯತ್ನಿಸಿದಾಗ ಸಿಕ್ಕಿ ಹಾಕಿಕೊಳ್ಳುತ್ತಾನೆ. ಪರೀಕ್ಷಿಸಿದಾಗ ಆ ಆಭರಣಗಳು ಪರ್ವತಕನ ಆಭರಣಗಳಾಗಿದ್ದು ಮಲಯಕೇತು ರಾಕ್ಷಸನಿಗೆ ಕೊಟ್ಟಿದ್ದ. ಮೊಹರು ರಾಕ್ಷಸನದ್ದಾಗಿರುತ್ತದೆ. (2ನೇ ಅಂಕ). ರಾಕ್ಷಸ ಚಂದ್ರಗುಪ್ತನೊಂದಿಗೆ ರಹಸ್ಯವಾಗಿ ವ್ಯವಹರಿಸಿರಬಹುದು ಎಂದು ಮಲಯಕೇತುವಿಗೆ ಸ್ಥಿರವಾಗುತ್ತದೆ ಮತ್ತು ಸಿದ್ಧಾರ್ಥಕನ ಬಾಯಿಮಾತಿನ ಆಧಾರದಲ್ಲಿ ಗೊತ್ತಾಗುತ್ತದೆ. ರಾಕ್ಷಸನು ತನಗೆ ವಂಚಿಸಿದ್ದಾನೆ ಎಂದು ಮಲಯಕೇತುವಿಗೆ ಗೊತ್ತಾಗುತ್ತದೆ, ಇದು ಶತ್ರುಗಳ ಕೈವಾಡ ಎಂದು ರಾಕ್ಷಸ ಪರಿಪರಿಯಾಗಿ ಹೇಳಿದರೂ, ಅದಕ್ಕೆ ಆಧಾರವಿಲ್ಲದ್ದರಿಂದ ಮತ್ತು ಪತ್ರದ ಒಕ್ಕಣೆ/ಬರವಣಿಗೆ ಅವನ ಆಪ್ತ ಶಕಟದಾಸನ ಬರವಣಿಗೆಗೆ ತಾಳೆ ಹೊಂದಿರುವುದರಿಂದ ರಾಕ್ಷಸನ ವಂಚನೆ ಬೆಳಕಿಗೆ ಬರುತ್ತದೆ.

ಪರ್ವತಕನ ಮುಖ್ಯ ಆಭರಣವನ್ನು ಮಲಯಕೇತು ಗುರುತಿಸುತ್ತಾನೆ. ಅಂತಿಮವಾಗಿ ಮಲಯಕೇತು ರಾಕ್ಷಸನನ್ನು ತ್ಯಜಿಸುತ್ತಾನೆ; ಆತನೇ ತನ್ನ ತಂದೆಯ ಸಾವಿಗೆ ಕಾರಣ, ಹೊರತು ಚಾಣಕ್ಯನಲ್ಲ ಎಂದು ಮಲಯಕೇತುವಿಗೆ ಗೊತ್ತಾಗುತ್ತದೆ; ಎಲ್ಲರಿಂದ ತ್ಯಜಿಸಲ್ಪಟ್ಟ ರಾಕ್ಷಸ ಕುಸುಮಪುರದ ಕಡೆ ಮಿತ್ರ ಚಂದನದಾಸನ ಪ್ರಾಣ ಕಾಪಾಡಲು ತೆರಳುತ್ತಾನೆ. ಕೌಲೂತಕ ಚಿತ್ರವರ್ಮನೇ ಮೊದಲಾದ ಐವರು ರಾಜರುಗಳ ಹತ್ಯೆಗೆ ಮಲಯಕೇತು ಆದೇಶಿಸುತ್ತಾನೆ.

**ಆರನೇ ಅಂಕ :**

ಮಲಯಕೇತು ಸಿದ್ಧಾರ್ಥಕನ ಪತ್ರದಲ್ಲಿ ಸೂಚಿತರಾದ ಐವರು ರಾಜರುಗಳನ್ನು ಹತ್ಯೆ ಮಾಡಿದ್ದರಿಂದ, ಅವನ ಸೈನ್ಯದಲ್ಲಿ ಉಳಿದ ರಾಜರುಗಳು ದಂಗೆ ಏಳುತ್ತಾರೆ, ಇದೇ ಸುಸಮಯ ಎಂದು ಚಾಣಕ್ಯನ ರಹಸ್ಯ ಅಣತಿಯಂತೆ ಭಾಗುರಾಯಣ ಮತ್ತು ಭದ್ರಭಟರು ಮಲಯಕೇತುವನ್ನು ಸೆರೆ ಹಿಡಿಯುತ್ತಾರೆ. ಮಲಯಕೇತುವಿನಿಂದ ತ್ಯಜಿಸಲ್ಪಟ್ಟ ಅಮಾತ್ಯ ರಾಕ್ಷಸ, ಚಾಣಕ್ಯ ನೀತಿಯಿಂದ ಬೆರಗಾಗಿ, ಕುಸುಮಪುರದ ಹೊರವಲಯದಲ್ಲಿದ್ದ ಜೀರ್ಣೋದ್ಯಾನಕ್ಕೆ ತಲುಪುತ್ತಾನೆ. ನಂದವಂಶ ನಾಶ ಅವನ ಹೃದಯ ಒಡೆದು ಹೋಗುವಂತೆ ಮಾಡಿದೆ. ಈಗ ಉಳಿದಿರುವ ಆಪ್ತಮಿತ್ರ ಚಂದನದಾಸನ ಪ್ರಾಣವನ್ನಾದರೂ ಉಳಿಸೋಣ ಎಂದು ರಾಕ್ಷಸ ಯೋಚಿಸುತ್ತಾನೆ, ಅದೊಂದೇ ತನಗೆ ಉಳಿದಿರುವ ಅಂತಿಮ ಮಾರ್ಗ ಎನ್ನುತ್ತಾನೆ.

**ಏಳನೇ ಅಂಕ :**

ನಾಟಕದ ಉತ್ತುಂಗ ಭಾಗ ತಲುಪುವುದು ಇದೇ ಅಂಕದಲ್ಲಿ; ಚಂದನದಾಸನನ್ನು ವಧ್ಯಸ್ಥಾನಕ್ಕೆ ಕರೆದುಕೊಂಡು ಚಾಂಡಾಲರಿಬ್ಬರು ವೇಣುವೇತ್ರಕ ಮತ್ತು ವಜ್ರಲೋಮಕ ಹೆಸರಿನವರು (ಚಾಣಕ್ಯನ ಆಪ್ತಚರರು) ಚಂದನದಾಸನನ್ನು ಎಳೆದುಕೊಂಡು ಹೋಗುವರು. ಆಪ್ತಮಿತ್ರನ ಗುಣಗಾನ ಮಾಡುತ್ತಾ ರಾಕ್ಷಸ ಆ ಜಾಗಕ್ಕೆ ಬರುತ್ತಾನೆ. ಈಗಾಗಲೇ ಜೀರ್ಣ ಉದ್ಯಾನದಲ್ಲಿ, ಈ ವಿಷಯ ಕೇಳಿ ಆತ್ಮಹತ್ಯೆಗೆ ಪ್ರಯತ್ನಿಸಿದ ವಿಷ್ಣುದಾಸನೆಂಬ ವರ್ತಕನ ನೆರೆಹೊರೆಯವನನ್ನು ತಡೆದಿದ್ದ ರಾಕ್ಷಸ, ಚಂದನದಾಸನನ್ನು ತತ್‌ಕ್ಷಣ ರಕ್ಷಿಸಬೇಕೆಂದು ಬಂದು ಚಾಣಕ್ಯನ ಮುಂದೆ ಶರಣಾಗುತ್ತಾನೆ; ಏಕೆಂದರೆ ಚಂದನದಾಸನ ಪ್ರಾಣಗಳಿಗೆ ಪ್ರತಿಯಾಗಿ ರಾಕ್ಷಸನ ಸೇವೆಯನ್ನು ರಾಜ್ಯಕ್ಕೋಸ್ಕರ ಚಾಣಕ್ಯ ಕೇಳುತ್ತಾನೆ. ವೃಷಲನ ಮುಖ್ಯಮಂತ್ರಿ ಸ್ಥಾನವನ್ನು ಚಂದನದಾಸನ ರಕ್ಷಣೆಗೋಸ್ಕರ ವಿಧಿಯಿಲ್ಲದೆ ಒಪ್ಪುತ್ತಾನೆ. ಅಷ್ಟರಲ್ಲಿ ಚಂದ್ರಗುಪ್ತ ಬರುತ್ತಾನೆ, ಚಾಣಕ್ಯ ತನ್ನ ಕೆಲಸ ಈಡೇರಿತು, ತಾನು

ಅಧ್ಯಯನ, ಅಧ್ಯಾಪನಕ್ಕೆ ಆಶ್ರಮಕ್ಕೆ ಮರಳಿ ಹೋಗಬಹುದು, ಎಂದು ಬಿಚ್ಚಲ್ಪಟ್ಟ ತನ್ನ ಶಿಖೆಯನ್ನು ಕಟ್ಟುತ್ತಾನೆ. ನಾಟಕ ಸುಖಾಂತ್ಯವಾಗಿ ಮುಕ್ತಾಯವಾಗುತ್ತದೆ.

## ಮುದ್ರಾರಾಕ್ಷಸ ನಾಟಕದ ವೈಶಿಷ್ಟ್ಯ

ಮುದ್ರಾರಾಕ್ಷಸವು ಏಳು ಅಂಕಗಳ ಯಾವ ಕಾಲಕ್ಕೂ ಸಲ್ಲುವ ಶುದ್ಧವಾದ ರಾಜಕೀಯ ತಂತ್ರ–ಪ್ರತಿತಂತ್ರಗಳಿಂದ ಕೂಡಿದ ನಾಟಕ. ಇದರ ವಸ್ತುವು ಚರಿತ್ರೆಯಲ್ಲಿ ನಡೆದಿದ್ದಾದರೂ ಈ ನಾಟಕವು ಕವಿಕಲ್ಪಿತ ಭಾಗಗಳಿಂದ ಕೂಡಿದ್ದು, ಸ್ವಾರಸ್ಯಕರವಾಗಿದೆ. ವಸ್ತು, ಸ್ವರೂಪ, ಸನ್ನಿವೇಶ, ರಚನೆ, ಪಾತ್ರಸೃಷ್ಟಿ ಮುಂತಾದ ಹಲವು ವಿಷಯಗಳಲ್ಲಿ ಇದು ಸಂಸ್ಕೃತ ಸಾಹಿತ್ಯದಲ್ಲಿಯೇ ಒಂದು ಅಪೂರ್ವವಾದ ಸ್ಥಾನವನ್ನು ಪಡೆದಿದೆ. ರಾಜನೀತಿಯನ್ನೇ ಮುಖ್ಯವಾಗಿ ಇಟ್ಟುಕೊಂಡಿರುವ ಇನ್ನೊಂದು ನಾಟಕವು ಭಾರತೀಯ ಸಾಹಿತ್ಯದಲ್ಲಿಯೇ ಇಲ್ಲವೆನ್ನಬಹುದು. ಮಹಾಮತಿಯಾದ ಚಾಣಕ್ಯನು ನವನಂದರನ್ನು ನಿರ್ಮೂಲನಗೊಳಿಸಿ ಚಂದ್ರಗುಪ್ತನಿಗೆ ಪಟ್ಟ ಕಟ್ಟಿ ಅಮಾತ್ಯ ರಾಕ್ಷಸನನ್ನು ಆತನಿಗೆ ಮಂತ್ರಿಯನ್ನಾಗಿ ದೊರಕಿಸಿ ಕೊಡುವುದೇ ಇದರ ಕಥಾವಸ್ತು. ನಾಟಕದ ವಸ್ತು ಮಹಾಕವಿಯಾದ ವಿಶಾಖದತ್ತನ ಕಲ್ಪನೆಯಿಂದ ಪುಷ್ಟಿಗೊಂಡಿದೆ.

ಚಾಣಕ್ಯ ಚಂದ್ರಗುಪ್ತರು ಐತಿಹಾಸಿಕ ವ್ಯಕ್ತಿಗಳು. ಇವರ ಕಥೆ ಭಾರತೀಯ ಸಾಹಿತ್ಯದ ಬೇರೆ ಬೇರೆ ಗ್ರಂಥಗಳಲ್ಲಿ ಸಂಕ್ಷೇಪವಾಗಿ ದೊರೆಯುತ್ತದೆ. ವಿಷ್ಣು ಪುರಾಣದಲ್ಲಿ ಕಲಿಯುಗದ ರಾಜರ ವರ್ಣನೆಯನ್ನು ಮಾಡುವಾಗ ಚಾಣಕ್ಯನು ನವನಂದರನ್ನು ಉನ್ಮೂಲನೆ ಮಾಡುತ್ತಾನೆ ಎಂಬ ವಿವರಗಳಿವೆ. ಭಾಗವತದಲ್ಲಿಯೂ ಚಂದ್ರಗುಪ್ತನ ಕಥೆ ಇದೆ. ಜೈನಕವಿಯಾದ ಹರಿಷೇಣನ ಬೃಹತ್ಕಥಾಕೋಶ, ಹೇಮಚಂದ್ರಸೂರಿಯ ಪರಿಶಿಷ್ಟ ಪರ್ವದಲ್ಲೂ ಬೌದ್ಧರ ಆರ್ಯಮಂಜುಶ್ರೀ ಮೂಲಕಲ್ಪ ಮತ್ತು ಮಹಾವಂಶಗಳಲ್ಲಿಯೂ ಚಾಣಕ್ಯನ ಕಥೆ ಉಲ್ಲೇಖವಾಗಿದೆ. ಕಥಾಸರಿತ್ಸಾಗರ, ಬೃಹತ್ಕಥಾಮಂಜರಿ, ಬೃಹತ್ಕಥಾ ಶ್ಲೋಕಸಂಗ್ರಹ ಈ ಗ್ರಂಥಗಳಲ್ಲೂ ಕಾಮಂದಕ ನೀತಿಸಾರದಲ್ಲೂ ಇದರ ಉಲ್ಲೇಖಗಳನ್ನು ಕಾಣಬಹುದು. ಮುದ್ರಾರಾಕ್ಷಸಕ್ಕೆ ಬೃಹತ್ಕಥೆಯೇ ಮೂಲವೆಂದು ಧನಿಕನು ಅಭಿಪ್ರಾಯ ಪಡುತ್ತಾನೆ. ಗ್ರೀಕ್ ಇತಿಹಾಸ ತಜ್ಞರು ಚಂದ್ರಗುಪ್ತನ ಬಗ್ಗೆ ವಿವರಗಳನ್ನು ಕೊಡುತ್ತಾರೆ. ಹೀಗೆ ಬಹುಸ್ರೋತಸ್ಸಿನಿಂದ ಪ್ರಸಿದ್ಧವಾದ ಬಹುಸಂಕೀರ್ಣವಾದ ವಸ್ತುವಿನಿಂದ ಕೂಡಿದ ನಾಟಕ ಮುದ್ರಾರಾಕ್ಷಸ. ಇದರ ಕಥಾ ಸಂಗ್ರಹಗಳನ್ನು ಅನಂತಭಟ್ಟ, ಮಹಾದೇವ, ರವಿನರ್ತಕ, ಜಗದ್ದರ

ಮೊದಲಾದವರು ಗದ್ಯ–ಪದ್ಯ ರೂಪದಲ್ಲಿ ಬರೆದಿದ್ದಾರೆ. ಈ ನಾಟಕಕ್ಕೆ ಜಗದ್ಧರ, ಢುಂಢಿಯೇ ಮೊದಲಾದವರ ಸೊಗಸಾದ ವ್ಯಾಖ್ಯಾನಗಳೂ ಲಭ್ಯವಿವೆ.

**ನಾಟಕದ ಶೀರ್ಷಿಕೆ :**

ಮುದ್ರಾ ಮತ್ತು ರಾಕ್ಷಸ ಎಂಬ ಎರಡು ಪದಗಳನ್ನು ಹೊಂದಿದ ನಾಟಕದ ಶೀರ್ಷಿಕೆಯಲ್ಲಿ ಅನೇಕ ಬಗೆಯ ಸ್ವಾರಸ್ಯಗಳನ್ನು ಕಾಣಬಹುದು. **ಮುದ್ರಯಾ ಜಿತಃ ವಶೀಕೃತೋ ವಾ ರಾಕ್ಷಸಃ ಸ ಏವ ಅಭೇದೋಪಚಾರಾತ್, ತದಾಖ್ಯಂ ನಾಟಕಮ್ – ಮುದ್ರಾರಾಕ್ಷಸಂ** ಎಂಬ ನಿರ್ವಚನವನ್ನು ಮಾಡಬಹುದು. **ಮುದ್ರಿತಃ ರಾಕ್ಷಸಃ** ಎಂದೂ ಅರ್ಥೈಸಬಹುದು. ರಾಕ್ಷಸನು ಮುದ್ರಿತನಾದ ಅಂದರೆ ಸೆರೆಹಿಡಿಯಲ್ಪಟ್ಟ, ಕಟ್ಟಿಹಾಕಲ್ಪಟ್ಟ ಎಂದು. ನವನಂದರ ನಿಷ್ಠಾವಂತನಾಗಿದ್ದ ಅಮಾತ್ಯರಾಕ್ಷಸನನ್ನು ಚಂದ್ರಗುಪ್ತನ ನಾಶಕ್ಕೆ ಸದಾ ತಂತ್ರಗಳನ್ನು ಹೆಣೆಯುತ್ತಿದ್ದವನನ್ನು ತನ್ನ ಅಪಾರ ಬುದ್ಧಿಬಲದಿಂದ ರಾಜಕೀಯ ತಂತ್ರಗಳಿಂದ ಚಂದ್ರಗುಪ್ತನಿಗೆ ವಿಧೇಯನಾಗಿ ನೀತಿ ತಪ್ಪದೆ ನಂಬಿಕೆಯಿಂದ ನಡೆದುಕೊಳ್ಳುವ ಸ್ಥಿತಿಗೆ ರಾಕ್ಷಸನನ್ನು ಚಾಣಕ್ಯನು ತರುತ್ತಾನೆ. **ಮುದ್ರೆಯೂ ರಾಕ್ಷಸನೂ** ಎಂದಾದರೆ ರಾಕ್ಷಸನ ಮುದ್ರೆಯುಂಗುರ ಸಿಕ್ಕಿ ಚಾಣಕ್ಯನು ಕುಳಿತ ಕಡೆಯಿಂದಲೇ ಭೇದೋಪಾಯಗಳಿಂದ ಕಷ್ಟನಷ್ಟಗಳಿಲ್ಲದಂತೆ ರಾಕ್ಷಸನನ್ನು ಹಿಡಿದು ಜಯವನ್ನು ಸಂಪಾದಿಸಿದನು. ಇನ್ನೊಂದು ರೀತಿಯಲ್ಲಿ ಯೋಚಿಸುವುದಾದರೆ **ಮುದ್ರಿತಂ ರಾಕ್ಷಸತ್ವಂ**. ಅಂದರೆ ಅಮಾತ್ಯ ರಾಕ್ಷಸನಲ್ಲಿದ್ದ ರಾಕ್ಷಸೀಗುಣಗಳು ನಿವಾರಣೆಯಾಗಿ ದೈವೀಗುಣಗಳು ಪ್ರಕಾಶಿತವಾಗಿ ನಿಸ್ಪೃಹನಾದ ಚಾಣಕ್ಯನಗೆ ಗೆಲುವಾಗಿ ಮಹಾಮಂತ್ರಿಯಾದ ರಾಕ್ಷಸನ ಸಂಗ್ರಹದಿಂದ ಚಂದ್ರಗುಪ್ತನ ರಾಜ್ಯ ನಿಷ್ಕಂಟಕವಾಯಿತು.

ಈ ನಾಟಕದಲ್ಲಿ ವಿಶೇಷವಾದ ವೀರರಸವಿದೆ. ಅಂಗರಸವಾಗಿ ಅತಿಗಹನವಾದ ಕೌಟಿಲ್ಯನ ರಾಜನೀತಿಯೆಂಬ ಅದ್ಭುತವಿದೆ. ಶೃಂಗಾರ ಕರುಣಾದಿಗಳು  ವ್ಯಕ್ತವಾಗುತ್ತವೆ. ಧೀರೋದಾತ್ತನಾದ ಚಂದ್ರಗುಪ್ತನು ನಾಯಕ. ವಿಷ್ಣುಪುರಾಣಾದಿಗಳಲ್ಲೂ ಹೇಳಲ್ಪಟ್ಟ ಪ್ರಖ್ಯಾತವಾದ ಇತಿವೃತ್ತವಿದೆ. ನಾಟಕದಲ್ಲಿ ಪಾತ್ರಗಳು ಖಚಿತವಾಗಿ ರೂಪಿತವಾಗಿವೆ. ವಿದೂಷಕನಿಲ್ಲ, ನಾಯಿಕೆಯಿಲ್ಲ. ಒಂದೆರಡು ಗೌಣ ಪಾತ್ರಗಳನ್ನು ಬಿಟ್ಟರೆ ಒಟ್ಟಾರೆ ಸ್ತ್ರೀ ಪಾತ್ರಗಳೇ ಇಲ್ಲ. ಅರ್ಥಶಾಸ್ತ್ರ, ರಾಜಶಾಸ್ತ್ರದ ನೀತಿಗರ್ಭಿತವಾದದ್ದು ಈ ನಾಟಕ. ಸಂಭಾಷಣೆಯು ಪಾತ್ರದ ಮೆರುಗನ್ನು ಹೆಚ್ಚಿಸುತ್ತದೆ. ಜಾಣತನದ ಮಾತುಗಳ ಪಾಂಡಿತ್ಯ ಇಲ್ಲಿಲ್ಲ. ಮಾತಿಗಿಂತಲೂ ಕಾರ್ಯವಿಧಾನ ಪ್ರಧಾನವಾಗಿದೆ. ಪಾಶ್ಚಾತ್ಯ ವಿದ್ವಾಂಸರೂ

ತುಂಬಾ ಹಾರ್ದವಾಗಿ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಡಾ॥ ಎ.ಕೆ. ವಾರ್ಡರ್‌ರವರು ತಮ್ಮ **ಇಂಡಿಯನ್ ಕಾವ್ಯ ಲಿಟರೇಚರ್** ಎಂಬ ಪುಸ್ತಕದ ಮೂರನೇ ಸಂಪುಟದಲ್ಲಿ ಮುದ್ರಾರಾಕ್ಷಸದ ಕುರಿತು ವಿಮರ್ಶಿಸಿದ್ದಾರೆ.

ಇಡೀ ನಾಟಕದ ನಿರ್ವಹಣೆಯು ಜುಟ್ಟು ಬಿಚ್ಚಿ ಜುಟ್ಟು ಕಟ್ಟುವ ಎರಡು ಕ್ರಿಯೆಗಳ ನಡುವೆ ನಡೆಯುತ್ತದೆ. ಮೊದಲನೇ ಅಂಕದಲ್ಲಿ **ತತಃ ಪ್ರವಿಶತಿ ಮುಕ್ತಾಂ ಶಿಖಾಂ ಪರಾಮೃಶನ್ ಕುಪಿತಃ ಚಾಣಕ್ಯಃ** ಬಿಚ್ಚುಗೂದಲನ್ನು ದಿಟವಾಗಿ ದಿಟ್ಟಿಸುತ್ತಾ ಸಿಟ್ಟಿನಿಂದ ಕೂಡಿದ ಚಾಣಕ್ಯ ಪ್ರವೇಶಿಸುತ್ತಾನೆ ಎಂದರ್ಥ. ಹೀಗೆ ಹೇಳಿದ ಕವಿ ಅದೇ ಚಾಣಕ್ಯನಿಂದ **ಪೂರ್ಣಪ್ರತಿಜ್ಞೇನ ಮಯಾ ಕೇವಲಂ ಬಧ್ಯತೇ ಶಿಖಾ** । ನನ್ನ ಪ್ರತಿಜ್ಞೆಯು ಪೂರ್ಣವಾಗಿದೆ ಜುಟ್ಟು ಕಟ್ಟುತ್ತೇನೆ ಎಂದು ಏಳನೇ ಅಂಕದಲ್ಲಿ ಹೇಳಿಸುತ್ತಾನೆ. ಇವೆರಡರ ನಡುವೆ ಬುದ್ಧಿಯ ಹೋರಾಟದಿಂದ ಕಲ್ಪಿತವಾದ ರಾಜಕೀಯ ತಂತ್ರಗಳು ಬಹಳ ಚಮತ್ಕಾರಿಗಳಾಗಿವೆ. ರಾಕ್ಷಸನು ನಂದ ಭಕ್ತಿಯನ್ನು ತ್ಯಜಿಸಿ ಚಂದ್ರಗುಪ್ತನ ಮಂತ್ರಿಯಾಗುತ್ತಿರಲಿಲ್ಲ. ಅವನಿಗೆ ಐಶ್ವರ್ಯಾದಿಗಳ ಲೋಭವೂ ಇರಲಿಲ್ಲ. ರಾಕ್ಷಸನು ಶತ್ರುವಾಗಿರುವ ತನಕ ಚಂದ್ರಗುಪ್ತನ ಸ್ಥಾನ ಅಸ್ಥಿರ. ಹೊರಗಿದ್ದ ಅವನನ್ನು ಒಳ ಹಾಕಿಕೊಂಡರೆ ವಿಶೇಷ ಲಾಭವುಂಟು. ಇದನ್ನರಿತೇ ಬುದ್ಧಿವಂತನೂ, ಶೂರನೂ ಆಗಿದ್ದ ರಾಕ್ಷಸನನ್ನು ಚಂದ್ರಗುಪ್ತನ ಮಂತ್ರಿಯನ್ನಾಗಿ ಮಾಡಿ ತಾನು ನಿಶ್ಚಿಂತನಾಗಿ ತಪಸ್ಸಿಗೆ ಹೋಗಬೇಕೆಂಬುದು ಚಾಣಕ್ಯನ ಆಶಯ. ಅದಕ್ಕಾಗಿ ಆ ತಂತ್ರಗಳು. ಅವನು ಆರಂಭಿಸಿದ ಕಾರ್ಯವನ್ನು ದಕ್ಷತೆಯಿಂದ ನಡೆಸುತ್ತಿದ್ದನು. ಸಣ್ಣದನ್ನೂ ಅಲಕ್ಷಿಸುತ್ತಿರಲಿಲ್ಲ. ಚಾಣಕ್ಯನು ಬಹುಮಟ್ಟಿಗೆ ಗೂಢಚಾರರ ಮತ್ತು ವೇಷಧಾರಿಗಳ ಮೂಲಕ ತನ್ನ ಕಾರ್ಯಗಳನ್ನು ಸಾಧಿಸಿದನು.

ಮುದ್ರಾರಾಕ್ಷಸ ಅಕ್ಷರಶಃ ಬಿಗಿಯಾದ ನಾಟಕ. ಪಾತ್ರಗಳು, ಸಂದರ್ಭ ಸನ್ನಿವೇಶಕ್ಕನುಗುಣವಾಗಿ ಆಡುವ ಉಕ್ತಿಗಳು ಯಾವಕಾಲಕ್ಕೂ ಸಲ್ಲುವಂತಹವುಗಳು. **ಅತ್ಯಾದರಃ ಶಂಕನೀಯಃ, ನ ಹಿ ಸರ್ವಃ ಸರ್ವಂ ಜಾನಾತಿ, ಅಯಮಪರೋ ಗಂಡಸ್ಯೋಪರಿ ಸ್ಫೋಟಃ, ಶಿರಸಿ ಭಯಮತಿದೂರೇ ತತ್ಪ್ರತೀಕಾರಃ** ಮುಂತಾದವು ಹೇರಳವಾಗಿವೆ. ವಿಧಿಯನ್ನು ಅಣಕಿಸುವ ಮಾತು ಹೀಗಿದೆ. **ದೈವಮವಿದ್ವಾಂಸಃ ಪ್ರಮಾಣಯಂತಿ**. ನಿಸ್ಪೃಹನಾದ ಚಾಣಕ್ಯನಗೆ ರಾಜನಿಂದೇನಾಗಬೇಕು ಅದಕ್ಕಾಗಿ ನಿರೀ**ಹಾಣಮೀಶಃ ತೃಣಮಿವ ತಿರಸ್ಕಾರ ವಿಷಯಃ** ಎನ್ನುತ್ತಾನೆ. ಆರಂಭಿಸಿದ ಕಾರ್ಯಗಳನ್ನು ಉತ್ತಮ ವ್ಯಕ್ತಿಗಳು ಎಂದಿಗೂ ತ್ಯಜಿಸುವುದಿಲ್ಲ. ಅಧಿಕಾರದಲ್ಲಿದ್ದರೆ ಅಥವಾ ಅಧಿಕಾರ ಸಿಕ್ಕಿ ಬಿಟ್ಟರೆ

ಜನರಿಂದ ಎಂತಹ ಪ್ರಾಮಾಣಿಕ ವ್ಯಕ್ತಿಯೂ ಅನುಮಾನಸಲ್ಪಡುತ್ತಾನೆ ಮುಂತಾದುವು ರಾಜಕೀಯದಲ್ಲಿ ಪಳಗಿದ ರಾಜನೀತಿ ಕುಶಲನೊಬ್ಬನ ಮಾತಿನಂತೆ (**ಅಧಿಕಾರಪದಂ ಹಿ ನಾಮ ನಿರ್ದೋಷಸ್ಯಾಪಿ ಪುರುಷಸ್ಯ ಮಹದಾಶಂಕಾಸ್ಥಾನಮ್**) ಕಂಡುಬರುತ್ತವೆ. ಇಂತಹ ಅನೇಕ ಉದಾಹರಣೆಗಳು ಈ ನಾಟಕದಲ್ಲಿ ಸಿಗುತ್ತವೆ. ಸಮರ್ಥನಾದ ಆಡಳಿತಗಾರನಲ್ಲದ ರಾಜನಲ್ಲಿ ಕೆಲಸ ಮಾಡುವ ಮಂತ್ರಿ ಎಷ್ಟೇ ಚಾಣಾಕ್ಷನಿದ್ದರೂ (**ಜೀರ್ಣಾಶ್ರಯಃ ಪತತಿ ಕೂಲಜ ವೃಕ್ಷ ವೃತ್ಯಾ**) ನದಿಯ ದಡದ ಲಡ್ಡು ಮಣ್ಣಿನಲ್ಲಿ ಬೇರಿಳಿಸಿದ ಹೆಮ್ಮರದಂತೆ ಯಾವಾಗ ಬೇಕಾದರೂ ನಾಶವಾಗಬಹುದು ಎಂಬ ರಾಕ್ಷಸನ ಮಾತು ಇಂದಿಗೂ ಪ್ರಸ್ತುತ. ಅರ್ಥಶಾಸ್ತ್ರವೇ ಮೊದಲಾದ ಶಾಸ್ತ್ರೀಯ ವಿಚಾರಗಳು ಕವಿಯ ಪ್ರತಿಭೆಯಿಂದ ಕಾವ್ಯದ ರಸಪಾಕದಲ್ಲಿ ಬೆರೆತು ಸಹೃದಯರಿಗೆ ರಸವತ್ತಾದ ಭೋಜನವನ್ನು ಉಣಬಡಿಸುತ್ತವೆ.

ಈ ನಾಟಕದಲ್ಲಿ ಬುದ್ಧಿಯ ಹೋರಾಟದಿಂದ ಕಲ್ಪಿತವಾದ ರಾಜಕೀಯ ತಂತ್ರಗಳು ಎಷ್ಟು ಪ್ರಬಲವಾಗಿವೆಯೋ ಅಂತೆಯೇ ನಿಷ್ಕಪಟವಾದ ಸ್ನೇಹವೂ ಅಷ್ಟೇ ಆರ್ದ್ರವಾಗಿದೆ. ಚಂದನದಾಸ ಮತ್ತು ಅಮಾತ್ಯ ರಾಕ್ಷಸನ ಸ್ನೇಹದ ಆಳ ಎಷ್ಟಿದೆ ಎಂಬುದನ್ನು ಮೊದಲನೇ ಅಂಕದಲ್ಲಿ ಮತ್ತು ಏಳನೇ ಅಂಕದಲ್ಲಿ ಕಾಣಬಹುದು. ಮೊದಲನೇ ಅಂಕದಲ್ಲಿ ಪ್ರಾಣ ಹೋದರೂ ರಾಕ್ಷಸನ ಪರಿವಾರವನ್ನು ನಿನಗೆ ಹಿಡಿದು ಕೊಡಲಾರೆನೆಂದು ಚಾಣಕ್ಯನಿಗೆ ಸೆಡ್ಡು ಹೊಡೆದು ಚಂದನದಾಸನು ಬಂಧಿತನಾಗುತ್ತಾನೆ. ಚಾಣಕ್ಯನು ಅವನ ಸ್ನೇಹದ ಆಳ ಕಂಡು ಸಂತೋಷಪಡುತ್ತಾನೆ. ಏಳನೇ ಅಂಕದಲ್ಲಿ ಏಕಾಕಿಯಾದ ರಾಕ್ಷಸನು ಬಂಧಿತನಾದ ಚಂದನದಾಸನನ್ನು ಬಿಡಿಸಿಕೊಳ್ಳಲು ಬಂದು **ನಮಃ ಸರ್ವಕಾರ್ಯ ಪ್ರತಿಪತ್ತಿಹೇತವೇ ಸುಹೃತ್ ಸ್ನೇಹಾಯ** ಎನ್ನುತ್ತಾನೆ. ಅವರಿಬ್ಬರ ನಡುವಿನ ಭಾವಬಂಧ ಸ್ನೇಹರಸವನ್ನು ತೋರ್ಪಡಿಸುತ್ತದೆ.

ಈ ನಾಟಕವನ್ನು ಕೊಂಡಾಡದೇ ಇರುವ ಆಲಂಕಾರಿಕರು ಇಲ್ಲವೆನ್ನಬಹುದು. ಕುಂತಕನು (ಆಸ್ತಾಂ ವಸ್ತುಷು ವೈದಗ್ಧೀ ಕಾವ್ಯೇ ಕಾಮಪಿ ವಕ್ರತಾಂ) ಮುದ್ರಾರಾಕ್ಷಸದ ವಕ್ರೋಕ್ತಿ ಚಮತ್ಕಾರಗಳನ್ನು ಕೊಂಡಾಡುತ್ತಾನೆ. ಈ ನಾಟಕದ ಹೆಸರು ವಸ್ತು ಪಾತ್ರ ಪದ್ಯಗಳೆಲ್ಲದರಲ್ಲೂ ಚಮತ್ಕಾರಗಳನ್ನು ಕಾಣಬಹುದು. ವಿಶಾಖದತ್ತನ ನಾಟಕದ ಸಂವಿಧಾನ, ಸಂಭಾಷಣ ಯೋಜನೆ, ಭಾಷೆಯ ಪ್ರೌಢಿಮೆ, ಉಪಮಾ, ರೂಪಕ, ಉತ್ಪ್ರೇಕ್ಷಾ ಮುಂತಾದ ಅಲಂಕಾರಗಳ ಸಮಯೋಚಿತ ಪ್ರಯೋಗ, ರಸ ಮತ್ತು ಭಾವಕ್ಕೆ ಅನುಗುಣವಾಗಿ ಸ್ರಗ್ಧರಾ

ವಸಂತತಿಲಕಾ, ಶಾರ್ದೂಲವಿಕ್ರೀಡಿತಾ ಮೊದಲಾದ ವೃತ್ತಗಳ ಬಳಕೆ ಸಹೃದಯರ ಕುತೂಹಲವನ್ನು ಪ್ರತಿಕ್ಷಣವೂ ತಣಿಸುವುದರಲ್ಲಿ ಸಂದೇಹವಿಲ್ಲ.

## ಪಾತ್ರಚಿತ್ರಣ – 1. ಚಾಣಕ್ಯ

ಮುದ್ರಾರಾಕ್ಷಸ ನಾಟಕದ ಪ್ರಧಾನ ಪಾತ್ರವೇ ಚಾಣಕ್ಯ. ಕವಿ ತನ್ನ ನಾಟಕಕ್ಕೆ ಮುದ್ರಾರಾಕ್ಷಸ ಎಂಬ ಸಮರ್ಪಕವಾದ ಶೀರ್ಷಿಕೆ ನೀಡಿದರೂ, ಆ ಮುದ್ರೆಯುಂಗರದಿಂದ ಅಮಾತ್ಯ ರಾಕ್ಷಸನನ್ನು ಚಂದ್ರಗುಪ್ತನ ಪರವಾಗಿ ಮಂತ್ರಿ ಪದವಿ ಸ್ವೀಕರಿಸುವಂತೆ ಮಾಡಿರುವುದು, ಇದೇ ಚಾಣಕ್ಯ ಚಾಣಾಕ್ಷ ತಂತ್ರ, ಪ್ರತಿತಂತ್ರಗಳಿಂದ ಎಂದರೆ ಅತಿಶಯೋಕ್ತಿಯಾಗಲಾರದು. ಸರಳ ಜೀವಿ, ಆತ್ಮವಿಶ್ವಾಸದ ಗಣಿ, ಅದ್ವಿತೀಯ ವಿದ್ವತ್ತು, ಅಪಾರ ಲೋಕಾನುಭವ, ರಾಜನೀತಿ–ಶಾಸ್ತ್ರ ಪಾರಂಗತ, ಮಾಡಿದ ಪ್ರತಿಜ್ಞೆಯ ಸಾಗರವನ್ನು ದಾಟಿದ ಮಹಾನ್ ಕಾರ್ಯಸಾಧಕ, ಹೀಗೆ ಯಾವ ಮಾತುಗಳಿಂದ ಚಾಣಕ್ಯನ ವ್ಯಕ್ತಿತ್ವವನ್ನು ಚಿತ್ರಿಸಿದರೂ, ಅದು ಸರಿಯೇ.

ಚಾಣಕ್ಯ, ಚಣಕ ಎಂಬ ಮುನಿಯ ಪುತ್ರ, ಕುಟಿಲ ರಾಜನೀತಿಯನ್ನು ಅರೆದು, ಕುಡಿದು, ಅದರ ಪ್ರಯೋಗವನ್ನು ಬಲ್ಲವನಾಗಿದ್ದರಿಂದ ಕೌಟಿಲ್ಯ ವಿಷ್ಣುಗುಪ್ತ ಅವನ ಮೂಲನಾಮ ತಕ್ಷಶಿಲೆಯಲ್ಲಿ ಅವನ ಅಧ್ಯಯನ, ಅಧ್ಯಾಪನ, ನಂದಸಭೆಯಲ್ಲಿ ತನಗುಂಟಾದ ಅವಮಾನವನ್ನು ತಾಳಲಾರದೆ, ಜುಟ್ಟು ಬಿಚ್ಚಿದ ತನ್ನ ಶಿಖೆಯನ್ನು ನಂದರ ನಾಶವಾಗದ ತನಕ ತಾನು ಕಟ್ಟಲಾರೆನು, ಎಂಬ ಲೋಕವಿದಿತವಾದ ಪ್ರತಿಜ್ಞೆ ಮಾಡುತ್ತಾನೆ; ಶಿಷ್ಯನಾದ ಚಂದ್ರಗುಪ್ತನಿಗೆ ದಂಡ ನೀತಿ, ಯುದ್ಧಾಭ್ಯಾಸ, ಶಸ್ತ್ರಾಭ್ಯಾಸ ಹೀಗೆ ನಾನಾ ವಿಧ ಶಾಸ್ತ್ರಗಳಲ್ಲಿ ಪ್ರವೀಣನನ್ನಾಗಿ ಮಾಡಿ, ದೈವದತ್ತವಾಗಿದ್ದ ಅವನ ಪ್ರತಿಭೆಯನ್ನು ಉದ್ದೀಪನಗೊಳಿಸಿ, ತನ್ನ ಬುದ್ಧಿಶಕ್ತಿಯ ಪ್ರಖರತೆಯಿಂದ (ಪರ್ವತಕನೇ ಮೊದಲಾದ) ಉಳಿದ ರಾಜರುಗಳ ಸ್ನೇಹ ಸಂಪಾದಿಸಿ, ನಂದೋನ್ಮೂಲನ ಮಾಡಿ, ಚಂದ್ರಗುಪ್ತನನ್ನು, ಮೌರ್ಯ ಸಾಮ್ರಾಜ್ಯದ ಸ್ಥಾಪಕನನ್ನಾಗಿ ಮಾಡುತ್ತಾನೆ.

ನಂದರನಾಶವಾಗಿ ಚಂದ್ರಗುಪ್ತನು ರಾಜ್ಯಾಭಿಷಿಕ್ತನಾದರೂ, ಅವನ ರಾಜ್ಯಲಕ್ಷ್ಮೀ ಇನ್ನೂ ಸ್ಥಿರಳಾಗಬೇಕಾದರೆ ಶಾಸ್ತ್ರಪಾರಂಗತನೂ, ಅಪಾರ ಮೇಧಾವಿಯೂ, ಯುದ್ಧನೀತಿ ನಿಪುಣನೂ ಮತ್ತು ನಿಷ್ಕಲ್ಮಷವಾದ ಸ್ವಾಮಿಭಕ್ತಿಯುಳ್ಳ ರಾಕ್ಷಸನು ಚಂದ್ರಗುಪ್ತನಿಗೆ ಮಹಾಮಂತ್ರಿಯಾದರೆ ಮಾತ್ರ ತನ್ನ ಪ್ರತಿಜ್ಞೆ ಪೂರ್ಣವಾದಂತೆ ಎಂದು ಭಾವಿಸಿದ ಚಾಣಕ್ಯ ಈ ದಿಸೆಯಲ್ಲಿ ಕಾರ್ಯೋನ್ಮುಖನಾಗುವುದೇ ಮೊದಲ ಅಂಕದ ಕಥಾನಕ; ಪ್ರಸ್ತಾವನೆಯ

ಕೊನೆಯಲ್ಲಿ ಸೂತ್ರಧಾರ ಚಾಣಕ್ಯನ ಪ್ರವೇಶಕ್ಕೆ ದಾರಿ ಮಾಡಿ ಕೊಡುತ್ತಾ कौटिल्यः कुटिलमतिः स एष येन... ಎನ್ನುತ್ತಾ ಚಂದ್ರಗ್ರಹಣ ಎಂಬ ಪದವನ್ನು ಚಂದ್ರಗುಪ್ತನ ಮೇಲೆ ಶತ್ರುಗಳಿಂದ (ಮಲಯ ಕೇತುವಿನ ಜತೆ ಸೇರಿದ ರಾಕ್ಷಸನಿಂದ क्रूरग्रहः सकेतु....) ಆಕ್ರಮಣ ಎಂದು ಅರ್ಥೈಸಿ ಧಾವಿಸುತ್ತಾನೆ; ಅಂದರೆ ಕನಸಿನಲ್ಲೂ ಅವನು ಚಂದ್ರಗುಪ್ತನ ಯೋಗಕ್ಷೇಮ ಬಯಸುವ ನಿಃಸ್ವಾರ್ಥಿ ರಾಜಕಾರಣಿ ಎಂದರೆ ತಪ್ಪಲ್ಲ.

ಪ್ರಥಮಾಂಕದ ಮುಖ್ಯ ದೃಶ್ಯದಲ್ಲಿ ಚಾಣಕ್ಯ ಶಿಷ್ಯನಿಗೆ ತನ್ನ ಸಾಧನೆಯನ್ನು ಮೆಲುಕು ಹಾಕುತ್ತಾ ವರ್ಣಿಸುತ್ತಾನೆ; ಆಗ ತಾನೇ ಆನೆಯ ಕುಂಭಸ್ಥಳವನ್ನು ಹೊಡೆದು ಅಲ್ಲಿಯ ರಕ್ತದಿಂದ, ಸಂಧ್ಯಾರುಣ ಕಾಲದ ಚಂದ್ರನ ಕೆಂಬಣ್ಣದಂತೆ ಕಾಣುವ ಕೋರೆಹಲ್ಲುಗಳನ್ನು ಯಾರು ತಾನೇ ಕೀಳಲು ಬಯಸುತ್ತಾನೆ ಎಂದು ಪ್ರಶ್ನಿಸುತ್ತಾನೆ ಚಾಣಕ್ಯ. ತನ್ನ ಶಿಖೆ ನಂದಕುಲದ ಕಾಲಸರ್ಪಿಣಿ, ಕೋಪಾಗ್ನಿ ಜ್ವಾಲೆಯ ಧೂಮಲತೆ ಎಂಬಿತ್ಯಾದಿ ಮಾತುಗಳಿಂದ ಆತ್ಮವಿಶ್ವಾಸ ಹೆಚ್ಚಿಸಿಕೊಂಡು, ಕೋಪದ ಬೆಂಕಿ ಆರಿದರೂ, ಅದಕ್ಕೆ ಶಕ್ತಿ ಇಲ್ಲವೆಂದರ್ಥವಲ್ಲ; ತಾನು ಯುದ್ಧವಿರಾಮ ಈಗ ಮಾಡಿದರೂ, ಸಾಮ, ದಾನ, ಭೇದೋಪಾಯಗಳಿಂದ ಚಂದ್ರಗುಪ್ತನ ರಾಜ್ಯಶ್ರೀಯನ್ನು ಸಶಕ್ತಳನ್ನಾಗಿ ಮಾಡುವ ಚಾಣಕ್ಯನ ಎದೆಗಾರಿಕೆ ಮೆಚ್ಚುವಂತಹದ್ದೇ.

ಚಾಣಕ್ಯನ ಯೋಜನೆ ಹೀಗಿರುತ್ತದೆ. ಅವನ ಆಪ್ತರು, ವಿಶ್ವಾಸಾರ್ಹ ಗೂಢಚಾರರು ನಾಟಕದುದ್ದಕ್ಕೂ ಜಾಲದಂತೆ ಹರಡಿರುವರು. ಆಪ್ತಮಿತ್ರ ಮತ್ತು ಸಹಪಾಠಿ ಇಂದುಶರ್ಮ ಕ್ಷಪಣಕನಾಗಿ ರಾಕ್ಷಸನ ನಂಬಿಕೆಗೆ ಪಾತ್ರನಾಗುತ್ತಾನೆ, ಚಾಣಕ್ಯನಿಗೆ ಶತ್ರುರಾಕ್ಷಸನ ಸುಳಿವು ನೀಡುತ್ತಾನೆ. ಚಾಣಕ್ಯನಿಂದ ಪ್ರೇರಿತರಾಗಿ ಸಿದ್ಧಾರ್ಥಕ, ಭಾಗುರಾಯಣ, ಭದ್ರಭಟ ಮೊದಲಾದ ಸೇನಾ ಪ್ರಮುಖರು ಶತ್ರು ಶಿಬಿರವನ್ನು ಸೇರಿ ಸ್ವಾಮಿ ಪರವಾಗಿ ಕಾರ್ಯ ಮಾಡುತ್ತಾರೆ.

ಅಮಾತ್ಯ ರಾಕ್ಷಸನಿಂದ ಚಂದ್ರಗುಪ್ತನ ಬಳಿ ಕಳುಹಿಸಲ್ಪಟ್ಟ ವಿಷಕನ್ಯೆಯನ್ನು ತನ್ನ ತಂತ್ರಗಾರಿಕೆಯಂತೆ ಪರ್ವತಕನ ಬಳಿ ಕಳುಹಿಸಿ, ಪರ್ವತಕನ ಸಾವಿಗೆ ಕಾರಣನಾಗುತ್ತಾನೆ. ಮತ್ತು ಅವನಿಗೆ ಕೊಡಬೇಕಾಗಿದ್ದ ಅರ್ಧ ರಾಜ್ಯ ಉಳಿಸುತ್ತಾನೆ. ಸಿದ್ಧಾರ್ಥಕನ ಮೂಲಕ ಮಲಯಕೇತುವಿಗೆ ಚಾಣಕ್ಯನೇ ತಂದೆಯ ಸಾವಿಗೆ ಕಾರಣ, ಇನ್ನು ಕುಸುಮಪುರದಲ್ಲಿದ್ದರೆ ಉಳಿಗಾಲವಿಲ್ಲ ಎಂದು ಪಾಟಲೀಪುತ್ರದಿಂದ ತನ್ನ ರಾಜ್ಯಕ್ಕೆ ಓಡಿಸುತ್ತಾನೆ. ತದನಂತರ ರಾಕ್ಷಸನಿಂದ

ನಿಯೋಜಿತರಾದ ಪರ್ವತಕನ ತಮ್ಮ ವೈರೋಚನ, ದಾರುವರ್ಮ ವಿಷವೈದ್ಯ ಅಭಯದತ್ತ ಮೊದಲಾದವರು ತಮ್ಮ ತಂತ್ರಗಳಿಗೆ ತಾನೇ ಬಲಿಯಾಗುತ್ತಾರೆ.

ನಾಟಕದ ಮುಂದಿನ ಭಾಗದಲ್ಲಿ ನಿಪುಣಕನೆಂಬ ಯಮಪಟಧಾರಿ ಚರ, ತನ್ನ ಸ್ವಾಮಿಗೆ ನಗರದಲ್ಲಿರುವ ರಾಕ್ಷಸನ ಪರವಾಗಿ ಕೆಲಸ ಮಾಡುವ ಮೂವರ ವಿಷಯವನ್ನು ಅರುಹುತ್ತಾನೆ. ಜೀವಸಿದ್ಧಿ ಕ್ಷಪಣಕನಾದರೋ ಚಾಣಕ್ಯನ ಗೂಢಚಾರನೇ. ಉಳಿದವರು ಕಾಯಸ್ಥ ಶಕಟದಾಸ ಮತ್ತು ರತ್ನವ್ಯಾಪಾರಿ ಚಂದನದಾಸ. ಶಕಟದಾಸನ ಮೇಲೆ ರಾಜದ್ರೋಹದ ಆರೋಪ ಹೊರಿಸಿ, ಶೂಲಕ್ಕೇರಿಸುವಂತೆ, ತನ್ನ ಗೂಢಚಾರರ ಮೂಲಕ ಬಿಡಿಸುವಂತೆ ಮತ್ತು ರಾಕ್ಷಸನ ಶಿಬಿರ ಸೇರುವಂತೆ ಮಾಡುವುದೇ ಚಾಣಕ್ಯನ ತಂತ್ರ.

ಚಂದನದಾಸನ ಮನೆಯಲ್ಲಿ ನಿಪುಣಕನಿಗೆ ದೊರೆತ ಮುದ್ರೆಯುಂಗರ ಚಾಣಕ್ಯನಿಗೆ ತಂತ್ರರೂಪಿಸಲು ಸಹಾಯಕವಾಗುತ್ತದೆ. ಶಕಟದಾಸನಿಂದ ಅನಾಮಧೇಯ ಪತ್ರ ಬರೆಸಿ, ರಾಕ್ಷಸನ ಮುದ್ರೆಯುಂಗರದಿಂದ ಬಿತ್ತಿ ಆ ಪತ್ರ ಮತ್ತು ಉಂಗುರವನ್ನು ಸಿದ್ಧಾರ್ಥಕನಿಗೆ ಕೊಟ್ಟು ಮುಂದಿನ ಯೋಜನೆಗೆ ಅನುವು ಮಾಡಿಕೊಳ್ಳುತ್ತಾನೆ ಚಾಣಕ್ಯ. ಚಂದನದಾಸನ ಮನೆಯಲ್ಲಿ ರಾಕ್ಷಸನ ಪರಿವಾರದವರಿಗೆ ರಕ್ಷಣೆ ಕೊಟ್ಟ ಅಪರಾಧದ ಮೇಲೆ ಅವನನ್ನು ಕರೆಸಿ, ಹೆದರಿಸಿ, ರಾಕ್ಷಸನ ಪರಿವಾರವನ್ನು ತಂದೊಪ್ಪಿಸುವಂತೆ ಹೇಳುತ್ತಾನೆ. ಮಿತ್ರಪ್ರೇಮಿಯಾದ ಚಂದನದಾಸ ಒಪ್ಪದಿದ್ದಾಗ ಅವನ ಸಂಪತ್ತನ್ನು ಮುಟ್ಟುಗೋಲು ಹಾಕಿ ಕಾರಾಗೃಹಕ್ಕೆ ಕಳುಹಿಸುತ್ತಾನೆ; ಮುಂದೆ ರಾಜನೇ ಅವನಿಗೆ ಮರಣದಂಡನೆ ವಿಧಿಸಲಿ ಎನ್ನುತ್ತಾನೆ. ಚಾಣಕ್ಯ, ಬಾಹ್ಯವಾಗಿ ಚಂದನದಾಸನಿಗೆ ಕಾರಾಗೃಹ ಶಿಕ್ಷೆ ವಿಧಿಸಿದರೂ, ಆಂತರ್ಯದಲ್ಲಿ ಆ ಕಲಿಯುಗದ ಶಿಬಿ ಎಂದು ಅವನ ಮಿತ್ರಪ್ರೇಮವನ್ನು ಕೊಂಡಾಡುತ್ತಾನೆ. ಯಾವ ರೀತಿಯಲ್ಲಿ ಮಿತ್ರನಾದ ರಾಕ್ಷಸನನ್ನು ರಕ್ಷಿಸಲು ಚಂದನದಾಸ ತನ್ನ ಪ್ರಾಣಗಳನ್ನು ಒತ್ತೆ ಇಟ್ಟಿದ್ದಾನೋ, ಅದೇ ರೀತಿ ಚಂದನದಾಸನ ಪ್ರಾಣವನ್ನು ಉಳಿಸಲು, ಅವನನ್ನು ನೇಣುಕುಣಿಕೆಯಿಂದ ಬಿಡಿಸಲು, ಬೇರೆ ಯಾವುದೇ ಉಪಾಯವಿಲ್ಲದೆ ರಾಕ್ಷಸ ಧಾವಿಸಿ ಬರುತ್ತಾನೆ. नूनं तस्यापि न प्रियाः अस्य आपदि तस्यापि प्राणाः नूनं न प्रियाः ಚಾಣಕ್ಯನಿಗೆ ಶತ್ರುವಿನ ಒಳ್ಳೆಯ ಗುಣವನ್ನು ಪ್ರಶಂಶಿಸುವುದು, ಮತ್ತು ಆ ಗುಣವನ್ನು ತನ್ನ ಅನುಕೂಲಕ್ಕೆ ಪರಿವರ್ತಿಸುವುದು ಕರತಲಾಮಲಕವಾಗಿದೆ. अहो राक्षस्य नन्दवंशे निरतिशयो भक्तिगुणः, ಎಂಬ ಮಾತು 'बहवस्ते दुर्लभास्त्वादृशाः' ರಾಕ್ಷಸನಲ್ಲಿರುವ ಪರಾಕ್ರಮ, ಜ್ಞಾನ ಮತ್ತು ಸ್ವಾಮಿನಿಷ್ಠೆ ಕೊಂಡಾಡುವ ರೀತಿ, कः इदं दुष्करं

कुर्यादिदानीं शिबिना विना' ಇತ್ಯಾದಿ ಮಾತುಗಳು ಚಾಣಕ್ಯನ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿವೆ. ಅಂಕದ ಕೊನೆಯಲ್ಲಿ ಅವನು ಹೇಳುವ 'बुद्धिस्तु मागान्मम' ಅಂದರೆ ತನ್ನ "ಮೇಧಾಶಕ್ತಿ ಮಾತ್ರ ತನ್ನನ್ನು ಬಿಟ್ಟು ಹೋಗದೆ, ಸದಾ ತನ್ನೊಂದಿಗಿರಲಿ" ಎಂಬ ಮಾತು ಚಾಣಕ್ಯನ ಆತ್ಮವಿಶ್ವಾಸ ಬುದ್ಧಿಶಕ್ತಿಯ ಮೇಲಿರುವ ನಂಬಿಕೆ ಮತ್ತು ಪ್ರಯತ್ನಗಳ ಮೂಲಕ ಕಾರ್ಯಸಾಧಿಸುವ ಛಲಗಾರಿಕೆಯನ್ನು ಸೂಚಿಸಿ ಅವನ ಪಾತ್ರಕ್ಕೆ ಚಿನ್ನದ ಕಳಶವಿಟ್ಟಂತಿದೆ.

## ಚಂದನದಾಸ

ಮುದ್ರಾರಾಕ್ಷಸವು ವಿಶಾಖದತ್ತನ ಮೇರುಕೃತಿ. ಈ ನಾಟಕದಲ್ಲಿ ಬರುವ ಎಲ್ಲಾ ಪಾತ್ರಗಳು ತಮ್ಮ ತಮ್ಮ ಗುರಿ–ಗೊತ್ತು ಹೊಂದಿವೆ. ಅವು ತಮ್ಮ ಗುಣ ವೈಶಿಷ್ಟ್ಯಗಳಿಂದ ಮನಸ್ಸು ಮುಟ್ಟುವಂತೆ ತಟ್ಟುವಂತೆ ಇವೆ. ಅಂತಹ ಒಂದು ಪಾತ್ರ ಚಂದನದಾಸ. ಚಂದನದಾಸ ಒಬ್ಬ ರತ್ನ ವ್ಯಾಪಾರಿ; ಮಣಿಕಾರ ಶ್ರೇಷ್ಠಿ; ಶೆಟ್ಟಿ; ಅಮಾತ್ಯರಾಕ್ಷಸನ ಜೀವದ ಸ್ನೇಹಿತ; ಹಾಗಿಲ್ಲದಿದ್ದರೆ, ರಾಕ್ಷಸ ತನ್ನ ಹೆಂಡತಿ ಮತ್ತು ಪರಿವಾರದವರನ್ನು ಅವನ ಮನೆಯಲ್ಲಿ ಬಿಟ್ಟು ದೂರ ಹೋಗುತ್ತಿರಲಿಲ್ಲ. ಚಾಣಕ್ಯನ ಪ್ರಕಾರ ರಾಕ್ಷಸನ ಕುಟುಂಬಕ್ಕೆ ರಕ್ಷಣೆ ಕೊಟ್ಟಿದ್ದೇ ಅವನು ಮಾಡಿದ ರಾಜದ್ರೋಹ, ಈ ಆಧಾರದ ಮೇಲೆ ವಿಚಾರಣೆಗೆ ಚಂದನದಾಸನನ್ನು ಚಾಣಕ್ಯ ಕರೆಸುತ್ತಾನೆ.

ಚಾಣಕ್ಯನ ಕರೆ ಬಂದಾಗ ಚಂದನದಾಸ ಶಂಕೆ ವ್ಯಕ್ತಪಡಿಸುತ್ತಾನೆ; (ಕಿಂ ಪುನಃ ಮಮ ಜಾತದೋಷಸ್ಯ) ಇಂತಹ ಅನಾಹುತ ನಡೆಯಬಹುದೆಂದು ಊಹಿಸಿದ ಅವನು ಧನಸೇನನೇ ಪ್ರಮುಖರಿಗೆ ರಾಕ್ಷಸನ ಮನೆಮಂದಿಯವರನ್ನು ಬೇರೆ ಕಡೆ ಸುರಕ್ಷಿತವಾಗಿಡುವಂತೆ ಮಾಡುತ್ತಾನೆ. ಚಾಣಕ್ಯ ಅವನ ತಪ್ಪನ್ನು ಹೇಳಿದಾಗ ಅವನು ಒಪ್ಪುವುದಿಲ್ಲ. ಸಾಮ, ದಾನ ಉಪಾಯಗಳಿಂದ ಅವನ ಮನ ಒಲಿಸಿದರೂ, ರಾಕ್ಷಸನ ಗೃಹಜನರನ್ನು ಬಿಟ್ಟು ಕೊಡುವುದಿಲ್ಲ. सुलभेषु अर्थलाभेषु...., ಚಾಣಕ್ಯನು ಹೇಳಿರುವಂತೆ ರಾಕ್ಷಸನ ಹೆಂಡತಿ–ಮಕ್ಕಳನ್ನು ತಂದೊಪ್ಪಿಸಿ ಸುಲಭವಾಗಿ ಹಣ ಸಂಪಾದನೆ, ಮಾಡುವ ರಾಜಕೃಪೆ ಅನುಭವಿಸುವ ಅವಕಾಶವಿದ್ದರೂ, कः इदं दुष्करं कुर्यात् इदानीं शिबिना विना ಎಂದು ಚಂದನದಾಸನನ್ನು ಕಲಿಯುಗದ ಶಿಬಿ, ತನ್ನ ಪ್ರಾಣವನ್ನೇ ಮಿತ್ರಕಾರ್ಯಕ್ಕೋಸ್ಕರ ಮುಡಿಪು ಇಡುವ ಮಹಾನ್ ವ್ಯಕ್ತಿ ಎಂದು ಚಾಣಕ್ಯ ಮನಸ್ಸಿನಲ್ಲಿ ಪ್ರಶಂಸೆ ಮಾಡುತ್ತಾನೆ. ಚಾಣಕ್ಯನ ಪ್ರಶಂಸೆಗೆ ಅರ್ಹನಾದ ಮಿತ್ರ

ಪ್ರೇಮಿ ಚಂದನದಾಸ. ಅವನ ಈ ಗುಣವನ್ನೇ ಗಾಳವಾಗಿ ಮಾಡಿ, ಮುಂದೆ ರಾಕ್ಷಸನನ್ನು ಮಣಿಸುವುದು, ಚಂದ್ರಗುಪ್ತನ ಪರವಾಗಿ ಸಾಚಿವ್ಯ ಪದವಿ ಸ್ವೀಕರಿಸುವಂತೆ ಮಾಡುವುದು ಇತಿಹಾಸವಾಗಿದೆ. ಚಂದನದಾಸ ಹೇಳುವಂತೆ– दिष्ट्या मित्रकार्येण मे विनाशः न पुरुषदोषेण ಎನ್ನುತ್ತಾ ಸಂತೋಷದಿಂದ ಶಿಕ್ಷೆಯನ್ನು ಸ್ವೀಕರಿಸುತ್ತಾನೆ. ಹೀಗೆ ಚಂದನದಾಸ ಅಪೂರ್ವ ತ್ಯಾಗದ, ಮಿತ್ರಪ್ರೇಮದ ಪ್ರತೀಕವಾಗಿದ್ದಾನೆ.

## Mahakavi Vishakadatta

Vishakadatta is the most celebrated author of the drama Mudrarakshasa. Like any other great poets as Bhasa, Kalidasa and others, Vishakadatta has not given much details in his works; except a few words in the prelude of the drama. It is customary for Sanskrit poets to give a brief introduction about the self through the stage director who converses with Nati (नटी) about the enactment of the play. Through Amukham, it is known that Vishakadatta is the author. He is the son of Prithu who had the title Maharaja (पृथुमहाराज) and the grandson of subordinate king Vateshwaradutta; in some recessions of the play, his fathers' name is found as Bhaskaradutta.

The word 'Datta' in the name reveals that the ancestors of the poet must have got the ownership of a small region, near present Bengal or South Bihar, the region in those days called 'Mandala' presumably gifted by Chandragupta Vikramadithya II of Gupta dynasty. The other name of Prithu is Bhaskardutta supports their view.

The Bahrathvakya of the drama ends with श्रीमद्बन्धुभृत्यश्चिरमवतु महीं पार्थिवचन्द्रगुप्तः which means Let the king Chandragupta along with his relatives and subordinates rule this earth Chandragupta referred here is of Gupta dynasty, whose contemporary was the dramatist. Scholars give many internal evidences to answer the query whether Chandragupta mentioned here is Chandragupta Maurya the founder of Maurya dynasty or that of Chandragupta Vikramadithya, of Gupta dynasty (4th Cen AD). According to many scholars, Vishakadutta

has given a picture-skew discipline of Chandragupta Maurya's period in his drama and through that he has highlighted his master-patron Chandragupta of Gupta dynasty. The events in the drama take place in Pataliputra, the capital of Magadha. Vishakadutta has mentioned about the concept of Buddisam, in the 7th Act - बुद्धानामपि चेष्टितं सुचरितैः क्लिष्टं विशुद्धात्मना (7-5) which means 'he by his being pure hearted conduct has surpassed even the deeds of Buddha with his noble deeds". The time matches with Fahiyan's visit to India, during which Buddism was on the rise and there was religious harmony everywhere. Based on this scholars fix the date of मुद्राराक्षस composition around 5th century A.D.

In some manuscripts, भरतवाक्य contains पार्थिवो दन्तिवर्मा, पार्थिवोऽवन्तिवर्मा are seen in the place of Chandragupta. The word Avantivarma is correct and he happened to be the son of Grahavarman, of Maukhari kingdom/dynasty the contemporary of Sri Harshavardhan of 7th cent A.D. on this ground some scholars argue that Vishakadutta must have composed the drama in and around 700 A.D.

Since Amathya Rakshasa is singing the verse भरतवाक्य, the word चन्द्रगुप्त in that verse is very apt. This time coincides with Chandragupta II of Gupta dynasty who had defeated Mlechas/Hunas, so it can be concluded that Vishakadutta lived around 5th cent AD in a place near Bengal that was a part of Magadha Kingdom.

The poet has not recorded any details about his birth place or the place of death. His writing match with गौडीया style, as he had depicted the ways and costumes of women of Gowda country

(present upper Orissa) and also the verse चीयते बालिस्यापि the place of paddy being grown, it is concluded that he was a resident of the lower Bengal, a part of Magadha Kingdom.

## Works of Vishakhadatta

1) **मुद्राराक्षसम् :** This is the monumental work of Vishakhadatta. It has 7 acts. It is this drama that has made him immortal in Sanskrit drama literature. The main theme of this drama is to make Rakshasa to accept the powerful post of the Chief Minister to Chandragupta in order to stabilize his power. This drama encompass all the plans and strategies made by Chanakya to achieve the goal. It is a drama based on political them.

मुद्रया जितः राक्षसः तदाख्यं नाटकम्-Which means Rakshasa won over by the signet ring; the ring which Chanakya gets trough his spy, in the house of Chandanadasa becomes the turning point in the drama. Through this signet ring Chanakya controls, monitors his plans and finally succeeds in securing Rakshasa to Chandragupta's side.

2) **देवीचन्द्रगुप्तम् :** The work belongs to Vishakhadatta, known only be references. This work is not available. It is quoted widly in Natyadarpana. The verses from this work is illustrated in शृङ्गारप्रकाश of Bhoja. The work depicts the life of Chandraguptha, of Mourya dynasty.

3) **अभिसारिकावाश्चितकम् :** This is a drama not available, but attributed to Vishakhadatta many later posts have illustrated verse from this drama in their respective works.

4) **राघवानन्दम् :** This drama is attributed to Vishakadatta. The work is not available. The verse रामोऽसौ भुवनेषु... is highlighted in सदुक्तिकर्णामृतम्. (Based on this it is concluded that) Vishakadatta has written this drama based on Ramayana.

(When one studies मुद्राराक्षस, it can be known that the poet had mastery over political science, Natyashastra and Nyana-logic. He was also an expert on astrological secured and mathematics eg. क्रूरग्रह सकेतु....

In all the poet was well versed in many branches knowledge and had multifaceted personality and skill. )

## Brief summary of the Plot

The drama Mudra Rakshasa is a unique one in Sanskrit dramatic literature. It is both historical and political, the theme of which is based on other than that of Ramayana and Mahabharatha. Vishakhadatta is the author of this master piece. It mainly focuses on ascension of king Chandraguptha Maurya to the throne of Magadha and the key role played by Acharya Chanakya in turning the loyalty of Amathya Rakshasa to the new king.

The drama has seven Acts. The theme is weaved with skill and talent. Chanakya is the predominant

character, where as his rival Amathya Rakshasa is प्रतिनायक (antihero) here. The story is narrated with atmost skill that it is not known till the end, as to who are the friends or foes of Chanakya. His spy network is so vast and pervaded everywhere, that it is difficult to understand whom to trust or not to trust. Chanakya's main aim is to shift the loyalty of Amathya from Nandas to Chandraguptha. If he were to succeed in this task, then he could very well undertake his self-study and teaching at his Gurukula in Takshashila. Rakshasa is intelligent, endowed with bravery and above all he is loyal to the core towards his master. He is the most suitable person to the post of Chief-Minister to Chandraguptha; if his royal power has to remain firm and established. Thus Chanakya makes all efforts in securing this goal namely Rakshasa accepting the offer of Chief-Minister post of Maurya dynasty. .. Chandragupta.

**1st Act**

After Nandi, (नन्दी) in which the stage director invokes the blessings of Lord Shiva's Vakrokti with his beloved Parvathi and the soft dance (Dukha Nrithya) of Tripurari-Shiva's grace be bestowed on all, the stage-manager converses with his wife, prepares the way for the entry of Chanakya on to the stage. The words Chandra-Grahana (lunar-eclipse) is misunder-stood by ever vigilant Chanakya for a possible attack on Chandragupta who bears similarity in name. कौटिल्यः कुटिलमतिः स... मौर्येन्दोर्द्विषदभियोग इत्यवैति । Who desires to attack Chandragupta while I am alive etc. A long soliloquy follows in which he expresses his achievements namely destruction of Nanda and establishing

Chandragupta as a king of Kusumapura (Magadha Kingdom). He outlines his plan of action. In the mean time, Nipunaka one of the spy appointed to know the reactions of subjects towards the new king, disguised as a mendicant holding the portrait of Yama and singing the songs glorifying Yama comes and informs Chanakya that all subjects are happy except three. The first one being क्षणणक जीवसिद्धि by name and the second one Shakatadasa, a scribe Kayastha, both are hostile to the new king. He then hands over a signet ring to Chanakya, which he got near the house of the Jewel merchant Chandanadasa. This he does to support his view-that Chandanadasa had given protection to the wife and family of Rakshasa in his hoase.

The signet ring plays a pivot role in the entire drama, the ground for which is set in the first act. Chanakya gets a certain letter with an unknown address, written by Sakatadasa, close aid of Rakshasa, then seals it with Rakshasa's ring and gives both the letter and the ring to Siddarthaka, with certain secret instructions. Next he summons Chandanadasa the jewel-merchant, orders him to deliver the family of Rakshasa to whom he had given protection in his house. Both using sama and Dana upaya he tries his best to convince Chandanadasa to surrender before him, but the later declines and remains firm in loyalty. For the present Chanakya orders him to be kept in imprisonment till Chandragupta himself pronounce death penalty. Meantime all the trustworthy men of Chandragupta like Bhagurayana, Bhadrabhatta and others have fled away, Chanakya remarks, let his intellect which had shown it's power in the destruction of the race of Nanda and which is more

powerful than hundreds of armies not desert him - बुद्धिस्तु मा गान्मम ।

## 2nd Act

If Chanakya dominates in Act I, it is Amathya Rakshasa who dominates in Second act, taking shelter in a place for away from kusumapura recoupling his plans and awaiting for what had happened in Kusumapura through the net work of his spies.

The snake charmer – Jeernavisha who in reality Viradhagupta, a close aid of Rakshasa gains entry into the camp of Rakshasa and informs him as to how all the plans made by him were failed by master plans of Chanakya. Attempts made by Rakshasa to kill Chandragupta through Vairochana, Daruvarma, Varvarthaka, and Physician Abhayadatta turned on their own self rather than the king due to the counter plans of chanakya.

